ನವಸಾಕ್ಷರ ಪುಸ್ತಕ ಮಾಲೆ ೮೧

ಅರಿವು

ಎನ್. ಅಮರೇಶ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೮೧

ಅರಿವು

ಎನ್. ಅಮರೇಶ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೧೧

ARIVU : By N. Amaresha. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
8/1, ಮಾರೇನಹಳ್ಳಿ, 1ನೇ ಕ್ರಾಸ್, 23ನೇ ಮೇನ್,
ಜೆ. ಪಿ. ನಗರ, ಬೆಂಗಳೂರು-560 078.
ಫೋನ್: 642102

ಅರಿವು

೧. ಓದು ಮರೆತ ಗಂಗಮ್ಮ

ಗಂಗಮ್ಮನಿಗೆ ಮೂರು ದಿನದಿಂದ ಜ್ವರ ಬಂದು ಮೆತ್ತಗಾಗಿದ್ದಳು. ಗುಡಿಸಲಲ್ಲಿ ಮೊಮ್ಮಗ ನಾಗರಾಜ ಮತ್ತು ಆಕೆ ಮಾತ್ರ ಇರುತ್ತಿದ್ದರು. ಎರಡನೆಯ ತರಗತಿಯಲ್ಲಿ ಓದುತ್ತಿದ್ದ ನಾಗರಾಜನಿಗೆ ಬೆಳಿಗ್ಗೆ ಮೈತೊಳೆಸಿ, ಊಟ ಮಾಡಿಸಿ ಕಳಿಸುವುದಕ್ಕೆ ಗಂಗಮ್ಮನಿಗೆ ತೊಂದರೆಯಾಗಿತ್ತು. ಅದರಲ್ಲಿ ನಾಗರಾಜ, ''ನನಗೆ ಪೆನ್ನು ಬೇಕು, ನೋಟು ಬುಕ್ಕು ಬೇಕು'' ಎಂದು ಹಠ ಹಿಡಿದಿದ್ದ. ''ಇವತ್ತು ಶಾಲೆಯಿಂದ ಬಂದ ಮೇಲೆ ಕೊಡಿಸುತ್ತೇನೆ'' ಎಂದರೂ, ''ದಿನಾಲು ಹೀಗೆಯೇ ಹೇಳುತ್ತಿದ್ದಿ'' ಎಂದು ಅಳತೊಡಗಿದ. ಹೇಗೋ ಸಮಾಧಾನ ಮಾಡಿ ಕಳಿಸಿದಳು. ಮೊಮ್ಮಗ ಶಾಲೆಗೆ ಹೋದ ಮೇಲೆ ಗಂಗಮ್ಮ ಹಾಸಿಗೆ ಹಿಡಿದು ಮಲಗಿದಳು. ಆದರೂ ನೆಮ್ಮದಿ ಅನ್ನಿಸಲಿಲ್ಲ. ಗಂಗಮ್ಮನಿಗೆ ವಯಸ್ಸಾಗುತ್ತ ಬಂದು ಮೈಯಲ್ಲಿ ಶಕ್ತಿಯೇ ಕಡಿಮೆಯಾಗಿತ್ತು.

ಗಂಗಮ್ಮನಿಗೆ ಒಬ್ಬ ಮಗಳಿದ್ದಳು. ಆಕೆಯನ್ನು ಮದುವೆ ಮಾಡಿ ಗಂಡನ ಮನೆಗೆ ಕಳಿಸಿದ ಮೇಲೆ ತಾನು ಒಂಟಿಯಾದಳು. ಬದುಕುವುದು ಎರಡು ಮೂರು ಮನೆಗಳ ಕೆಲಸ ಮಾಡಿ. ಆರೇಳು ವರ್ಷ ಹೀಗೆ ಕಳೆಯುವುದರಲ್ಲಿ ಜೀವಕ್ಕೆ ಬೇಸರವೆನಿಸಿತು.

ಆಸರೆಗೆಂದು ಮೊಮ್ಮಗ ನಾಗರಾಜನನ್ನು ಕರೆತಂದಳು. ಶಾಲೆಗೂ ಸೇರಿಸಿದಳು. ಅವನು ಬಂದು ಎರಡು ವರ್ಷವಾಗಿತ್ತು. ಗಂಗಮ್ಮನಿಗೆ ಮಗಳು ತಿಂಗಳಿಗೆ ಐವತ್ತು ರೂಪಾಯಿ ಕಳಿಸುತ್ತಿದ್ದಳು.

ಈಗ ಜ್ವರ ಬಂದದ್ದರಿಂದ ಮನೆಗಳ ಕೆಲಸಕ್ಕೂ ಹೋಗಿರಲಿಲ್ಲ. ಇಂಥ ಸಮಯದಲ್ಲಿ ಗಂಗಮ್ಮ, ತನ್ನ ಗುಡಿಸಲ ಹತ್ತಿರದಲ್ಲಿ ಬೀಡಿ ಅಂಗಡಿ ಇಟ್ಟುಕೊಂಡಿದ್ದ ಆಂಜನೇಯನ ನೆರವು ಪಡೆಯುತ್ತಿದ್ದಳು. ಆತ ಬೇಕೋ ಬೇಡೋ ಈಕೆಗೆ ನೆರವಾಗುತ್ತಿದ್ದ. ಗಂಗಮ್ಮ ಈ ತಿಂಗಳು ಮಗಳು ಕಳಿಸುವ ಹಣಕ್ಕಾಗಿ ದಾರಿ ಕಾಯುತ್ತಿದ್ದಳು. ನಾಗರಾಜನಿಗೆ ಪೆನ್ನು, ನೋಟುಬುಕ್ಕು ಕೊಡಿಸುವುದಕ್ಕೂ ಮತ್ತು ತನಗೆ ಔಷಧ ಕೊಳ್ಳುವುದಕ್ಕೂ ಹಣ ಬೇಕಾಗಿತ್ತು.

"ಗಂಗಮ್ಮ" ಎಂದು ಆಂಜನೇಯ ಕರೆದಂತಾಯಿತು. ಮಲಗಿದ್ದ ಗಂಗಮ್ಮ ಮೆಲ್ಲಗೆ ಎದ್ದು ಹೊರಗೆ ಬಂದಳು. ಆಂಜನೇಯನ ಬೀಡಿ ಅಂಗಡಿಯ ಮುಂದೆ ಪೋಸ್ಟುಮನ್ನು ನಿಂತಿದ್ದ. ಗಂಗಮ್ಮನಿಗೆ ಸಂತೋಷವಾಯಿತು. ಅವಸರದಿಂದ ಬಂದಳು. ಪೋಸ್ಟುಮನ್ನು ಆಕೆಯ ಕೈಯಿಗೆ ಪೆನ್ನು ಮತ್ತು ಉದ್ದನೆಯ ಕಾಗದ ಕೊಟ್ಟು "ಸಹಿ ಮಾಡಮ್ಮ" ಎಂದ ಮಾಮೂಲಿಯಂತೆ. ಯಥಾಪ್ರಕಾರ ಗಂಗಮ್ಮ ಮೆಲ್ಲಗೆ ಮೂರಕ್ಷರ ಬರೆದಳು. ಅದೇ ಆಕೆಯ ಸಹಿಯಾಗಿತ್ತು. ಆತ ಮೂವ್ವತ್ತು ರೂಪಾಯಿ ಕೊಟ್ಟು ಹೋದ. ಹತ್ತು ರೂಪಾಯಿಯ ಮೂರು ನೋಟು ಹಿಡಿದುಕೊಂಡ ಗಂಗಮ್ಮನ ಮುಖ ಸಪ್ಪಗಾಗಿತ್ತು.

"ಆಂಜನೇಯ, ನನ್ನ ಮಗಳು ಈ ತಿಂಗಳೂ ಮೂವ್ವತ್ತು ರೂಪಾಯಿ ಕಳಿಸಿದ್ದಾಳೇನು?" ಎಂದು ಕೇಳಿದಳು.

"ಪೋಸ್ಟುಮನ್ನು ಸುಳ್ಳು ಹೇಳುತ್ತಾನೇನು? ನಿನ್ನ ಮಗಳಿಗೆ ಏನೋ ತೊಂದರೆ ಇರಬೇಕು. ಅದಕ್ಕೆ ಕಡಿಮೆ ಹಣ ಕಳಿಸಿರಬೇಕು" ಎಂದು ಸಿಡುಕಿದ



ಪೋಸ್ಟ್‌ಮನ್ನು ನೀಡಿದ ಎಂ.ಓ. ನಮೂನೆಗೆ ಗಂಗಮ್ಮ ಸಹಿ ಹಾಕಿದಳು

ಗಂಗಮ್ಮನಿಗೆ ಚಿಂತೆಯಾಯಿತು. ಮೂರು ತಿಂಗಳಿನಿಂದ ಮೂವ್ವತ್ತು ರೂಪಾಯಿ ಬಂದಿವೆ ಎಂದು ಪೋಸ್ಟುಮನ್ನು ಕೊಡುತ್ತಿದ್ದ. ಆಂಜನೇಯನನ್ನು ಕೇಳಿದರೆ "ಹೌದು" ಅಂದು ಬಿಡುತ್ತಿದ್ದ. ಈ ವಿಷಯವನ್ನು ಮಗಳಿಗೆ ತಿಳಿಸಬೇಕು ಎಂದು ಗಂಗಮ್ಮ ಯೋಚಿಸಿದ್ದಳು. ಅದಕ್ಕಾಗಿ ಪತ್ರ ಬರೆದು ಹಾಕಲು ಆಂಜನೇಯನಿಗೇ ಹೋದ ತಿಂಗಳೇ ಹೇಳಿ ಒಂದು ಪತ್ರವನ್ನು ಕೊಡಿಸಿದ್ದಳು. ಪತ್ರ ಹಾಕಿದನೋ ಇಲ್ಲವೋ ತಿಳಿಯಲಿಲ್ಲ. ಯಾಕೆಂದರೆ ಮಗಳಿಂದ ಉತ್ತರ ಬಂದಿರಲಿಲ್ಲ. "ಮಗಳಿಗೆ ಪತ್ರ ಹಾಕಿದೇನು?" ಎಂದು ಕೇಳಿದಳು. ಅದಕ್ಕೆ ಆಂಜನೇಯ, "ನಿನ್ನೆದುರಿಗೇ ಬರೆದು ಅದೇ ಪೋಸ್ಟುಮನ್ನನಿಗೆ ಕೊಡಲಿಲ್ಲೇನು?" ಎಂದು ಗಿರಾಕಿಗಳಿಗೆ ಸಾಮಾನು ಕೊಡುವ ಕಡೆ ಗಮನ ಹರಿಸಿದ. ಗಂಗಮ್ಮ ನಿರಾಸೆಯಿಂದ ತನ್ನ ಗುಡಿಸಲಿಗೆ ಬಂದು ಮಲಗಿದಳು. ಆದರೆ ಮನಸ್ಸಿಗೆ ಸಮಾಧಾನವಿರಲಿಲ್ಲ.

ನಾಗರಾಜ ಮಧ್ಯಾಹ್ನ ಶಾಲೆಯಿಂದ ಊಟಕ್ಕೆ ಬಂದ. ಪೆನ್ನು, ನೋಟುಬುಕ್ಕು ಬೇಕೆಂದು ಹಠ ಹಿಡಿದನು.

"ಇವತ್ತು ಸಂಜೆ ಕೊಡಿಸುತ್ತೇನೆ. ನೀನು ಶಾಲೆಯಿಂದ ಬಂದ ಕೂಡಲೇ ಅಂಗಡಿಗೆ ಹೋಗೋಣ" ಎಂದಳು ಗಂಗಮ್ಮ. ನಾಗರಾಜನಿಗೆ ಭರವಸೆ ಕಂಡಿತು. ಸಂತೋಷದಿಂದ ಶಾಲೆಯಲ್ಲಿ ಕೊಟ್ಟ ಒಂದು ಕಾರ್ಡನ್ನು ಅವ್ವನಿಗೆ ಕೊಟ್ಟು "ಅವ್ವ, ನಾನು ತಿಂಗಳ ಪರೀಕ್ಷೆಯಲ್ಲಿ ಪಾಸಾಗಿದ್ದೇನೆ" ಅಂದ. ಗಂಗಮ್ಮ ಅದಕ್ಕೂ ರೂಢಿಯಂತೆ ಸಹಿ ಮಾಡಿದಳು.

"ಪಾಸಾಗಿದ್ದಿ ತಾನೇ?"

"ಹೂಂ" ಅಂದ ನಾಗರಾಜ ಊಟ ಮಾಡಿ ಶಾಲೆಗೆ ಹೋದ. ನಂತರ ಗಂಗಮ್ಮನಿಗೆ ಶಾಲೆ ಮಾಸ್ತರರನ್ನು ಕಂಡು ಬರಬೇಕೆನಿಸಿತು. ಜ್ವರ ಬಂದಿದ್ದರೂ ಎದ್ದು ಮೆಲ್ಲಗೆ ನಡೆಯುತ್ತ ನಾಗರಾಜ ಓದುತ್ತಿದ್ದ ಶಾಲೆಗೆ ಬಂದಳು. ಆಕೆಯನ್ನು ನೋಡಿದ ಮಾಸ್ತರ್ ಕರೆದು ಬಂದ ಕಾರಣವನ್ನು ವಿಚಾರಿಸಿದರು.

"ನನ್ನ ಮಗಳು ತಿಂಗಳಿಗೆ ಐವತ್ತು ರೂಪಾಯಿ ಕಳಿಸುತ್ತಿದ್ದಳು. ಮೂರು ತಿಂಗಳಿನಿಂದ ಮೂವತ್ತು ರೂಪಾಯಿ ಕಳಿಸಿದ್ದಾಳೆಂದು ಆ ಪೋಸ್ಟುಮನ್ನು ಹೇಳುತ್ತಾನೆ. ಆಂಜನೇಯ ಕೂಡ ಹಾಗೇ ಹೇಳುತ್ತಾನೆ. ನನಗೆ ಅನುಮಾನ ಬಂದಿದೆ. ಅದಕ್ಕೆ ಬಂದಿದ್ದೇನೆ" ಅಂದಳು.

"ನೀನು ಎಂ.ಓ. ಫಾರಂ ಮೇಲೆ ಬರೆದದ್ದು ನೋಡಲಿಲ್ಲೇನು?" ಎಂದು ಮಾಸ್ತರರು ಕೇಳಿದರು.

"ನನಗೇನು ತಿಳಿಯುತ್ತದೆ? ಆಂಜನೇಯ ನೋಡಿ ಹಾಗೇ ಹೇಳಿದ."

"ನಿನ್ನ ಮಗಳಿಗೆ ಒಂದು ಪತ್ರ ಬರೆದು ತಿಳಿಸಬೇಕಿತ್ತು."

"ಪತ್ರ ಬರೆದು ಹಾಕು ಅಂತ ಆಂಜನೇಯನಿಗೆ ಹೇಳಿದ್ದೆ. ಹಾಕಿದ್ದೇನೆ ಅಂದ. ಆದರೆ ಮಗಳಿಂದ ಉತ್ತರ ಬಂದಿಲ್ಲ."

"ಗಂಗಮ್ಮ, ನೀನು ನಾಳೆ ಬಾ. ವಿಚಾರಿಸಿಕೊಂಡು ಬಂದು ಹೇಳುತ್ತೇನೆ" ಎಂದು ಹೇಳಿದರು.

೨

ಗಂಗಮ್ಮ ಮರುದಿನ ಶಾಲೆಗೆ ಬಂದು ಮಾಸ್ತರರನ್ನು ಕಂಡಳು.

"ನಿನ್ನ ಮಗಳು ತಪ್ಪದೇ ಪ್ರತಿ ತಿಂಗಳು ಐವತ್ತು ರೂಪಾಯಿಗಳನ್ನು ಕಳಿಸಿದ್ದಾಳೆ. ನೀನು ಎಂ.ಓ. ಫಾರಂ ಮೇಲೆ ಸಹಿ ಮಾಡಿಯೇ ಹಣವನ್ನು ತೆಗೆದುಕೊಂಡಿದ್ದಿ" ಅಂದರು ಮಾಸ್ತರರು.

"ನಾನೇ ಸಹಿ ಮಾಡಿದ್ದೇನೆ, ನಿಜ. ಎಷ್ಟು ರೂಪಾಯಿ ಎಂದು ನೋಡಲು ನನಗೆ ತಿಳಿಯುವುದಿಲ್ಲ. ನಾನು ಕಲಿತವಳಲ್ಲ" ಎಂದು ಗಂಗಮ್ಮ ಅಸಮಾಧಾನಗೊಂಡಳು.

"ಸಹಿ ಮಾಡಲು ಕಲಿತಿರುವಿಯಲ್ಲ?"

"ಹೌದು, ಎರಡು ಮೂರು ವರುಷದ ಹಿಂದೆ ದೊಡ್ಡವರಿಗೂ ಅಕ್ಷರ ಕಲಿಸಲು ಸರಕಾರದಿಂದ ನಿಮ್ಮಂಥವರು ಬಂದಿದ್ದರು. ನಾನು ಹೋಗಿ ಅಕ್ಷರ ಕಲಿತೆ. ಅವರು ನನಗೆ ನನ್ನ ಹೆಸರು ಬರೆಯುವುದನ್ನು ಕಲಿಸಿದ್ದರು."

ನೋಡು ಗಂಗಮ್ಮ, ಅಕ್ಷರ ಕಲಿತು ಮರೆಯಬಾರದು. ಮರೆಯಬಾರದು ಅಂದರೆ ಹಾಗೆಯೇ ಓದುವುದನ್ನು ಬರೆಯುವುದನ್ನು ರೂಢಿಸಿಕೊಳ್ಳಬೇಕು. ಹಾಗೇನಾದರೂ ನೀನು ಕಲಿತಿದ್ದರೆ ಈಗ ಪೋಸ್ಟುಮನ್ನು ಮತ್ತು ಆಂಜನೇಯ ಕೂಡಿ ನಿನಗೆ ತಪ್ಪು ತಿಳುವಳಿಕೆ ನೀಡಲು ಸಾಧ್ಯವಿತ್ತೆ?" ಮಾಸ್ತರರು ತಿಳುವಳಿಕೆ ನೀಡತೊಡಗಿದರು.

"ನಾನು ಅವರನ್ನು ನಂಬಿದ್ದೆ" ಅಂದಳು ಗಂಗಮ್ಮ.

"ಆದರೂ ಎಚ್ಚರದಿಂದಿರಬೇಕು. ನಿನ್ನ ಮೊಮ್ಮಗ ಈಗ ಶಾಲೆ ಕಲಿಯುತ್ತಿದ್ದಾನೆ. ನಿನಗೆ ಓದು ಬರಹ ಬರುತ್ತಿದ್ದರೆ ಅವನಿಗೆ ನೀನೇ ಮನೆಯಲ್ಲಿ ರಾತ್ರಿ ಪಾಠ ಹೇಳಬಹುದಾಗಿತ್ತು. ನಿನ್ನ ಮಗಳಿಗೆ ಪರರಿಂದ ಪತ್ರವನ್ನು ಬರೆಸಬೇಕಾಗಿರಲಿಲ್ಲ. ಹೌದೋ ಅಲ್ಲವೋ?" ಎಂದು ತಿಳಿಸಿದರು.

"ಹೌದಪ್ಪ, ಆವಾಗ ಕಲಿಸಿದ ಅಕ್ಷರಗಳನ್ನು ಮರೆಯದೆ ಓದುವುದು, ಬರೆಯುವುದು ಕಲಿಯಬೇಕಾಗಿತ್ತು. ಅಂದ ಹಾಗೆ ನಮ್ಮ ನಾಗರಾಜ ಪಾಸಾಗಿದ್ದೇನೆ ಅಂತ ಹೇಳಿದ. ನಾನು ಸಹಿ ಮಾಡಿದ್ದೇನೆ. ಅದು ನಿಜವೋ ಸುಳ್ಳೋ" ಎಂದು ಕೇಳಿದಳು.

"ನಾಗರಾಜ ತಿಂಗಳ ಪರೀಕ್ಷೆಯಲ್ಲಿ ಪಾಸಾಗಿಲ್ಲ. ಇನ್ನು ಮೇಲೆ ನೀನು ಬಿಡುವು ಮಾಡಿಕೊಂಡು ಅಕ್ಷರ ಅಭ್ಯಾಸ ಮಾಡು. ದಿನನಿತ್ಯದ ವ್ಯವಹಾರಕ್ಕೆ ಬರುವಂತೆ. ಲೆಕ್ಕವನ್ನೂ ಕಲಿಯಬೇಕು. ಅಂದರೆ ಮಾತ್ರ ನಿನಗೆ ನೀನು ಕಲಿತ ವಿದ್ಯೆಯೇ ಶಕ್ತಿ ನೀಡುತ್ತದೆ" ಎಂದರು ಮಾಸ್ತರರು. ಗಂಗಮ್ಮ ಅದೆಲ್ಲವನ್ನು ಕೇಳಿದಳು. ಕಲಿತದ್ದನ್ನು ಮರೆಯದೇ ಅಭ್ಯಾಸವನ್ನು ಮುಂದುವರಿಸಬೇಕು ಎಂದು ಗಟ್ಟಿ ಮನಸ್ಸು ಮಾಡಿ ಮನೆಗೆ ಬಂದಳು.

೨. ಮೋಸ ಎಲ್ಲಿಯವರೆಗೆ?

ಬಸವರಾಜನ ತಂದೆ ದೇವಪ್ಪನಿಗೆ ವಯಸ್ಸಾಗುತ್ತ ಬಂದು ಮೆತ್ತಗಾಗಿದ್ದ. ಇತ್ತೀಚೆಗೆ ದುಡಿಯುವುದು ಕಡಿಮೆಯಾಗಿತ್ತು. ಕಳೆದ ಹತ್ತು ದಿನದಿಂದ ಒಮ್ಮೆಯೂ ದುಡಿಯಲು ಹೋಗಿರಲಿಲ್ಲ. ಮಗ ಬಸವರಾಜ ಮತ್ತು ಸೊಸೆ ನೀಲಮ್ಮ ಪ್ರತಿದಿನ

ದುಡಿದರೂ ಒಮ್ಮೊಮ್ಮೆ ಹೊಟ್ಟೆಬಟ್ಟೆಗೆ ಸಾಲುತ್ತಿರಲಿಲ್ಲ. ಅವರಿಗೆ ಇಬ್ಬರು ಸಣ್ಣಮಕ್ಕಳಿದ್ದಾರೆ. ಮೊನ್ನೆಯಿಂದ ಜ್ವರ ಬಂದು ಮಲಗಿದ್ದ ತಂದೆಯನ್ನು ನೋಡಿಕೊಳ್ಳುವುದು ಬಸವರಾಜನ ಕರ್ತವ್ಯವಾಗಿತ್ತು. ನೀಲಮ್ಮನಿಗೆ ಅಡಿಗೆ ಮಾಡಲು ಏನೂ ಸಾಮಾನುಗಳಿರಲಿಲ್ಲ.

"ಇವತ್ತು ಸಂತೆ. ಬೇಗ ಸಾಮಾನು ತಂದು ಕೊಡಿ. ಮನೆಯಲ್ಲಿ ಏನೂ ಇಲ್ಲ" ಎಂದಳು ಗಂಡನಿಗೆ.

ವಾರದಿಂದ ದುಡಿದ ಹಣ ಲೆಕ್ಕ ಹಾಕಿದರೆ ಪ್ರತಿ ವಾರಕ್ಕಿಂತ ಕಡಿಮೆಯಾಗಿತ್ತು. ಯಾಕೆಂದರೆ ತಂದೆ ಈ ವಾರದಲ್ಲಿ ಕೂಲಿಗೆ ಹೋಗಿರಲಿಲ್ಲ. "ಅಪ್ಪನಿಗೆ ಔಷಧಿ ಕೊಡಿಸಬೇಕು. ಡಾಕ್ಟರ್ ಹತ್ತಿರ ತೋರಿಸುವುದಕ್ಕೆ ಕರೆದುಕೊಂಡು ಹೋಗಬೇಕು" ಅಂದ. "ಹೌದು, ಮಾವನಿಗೆ ತೋರಿಸಬೇಕು. ಔಷಧ ಕೊಡಿಸಿ ಉಳಿದ ಹಣದಲ್ಲಿ ಅಡಿಗೆ ಸಾಮಾನು ತಂದುಬಿಡಿ" ಅಂದಳು. ಬಸವರಾಜ ತಂದೆಯನ್ನು ಡಾಕ್ಟರಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿದ. ಔಷಧಿ ಕೊಡಿಸಿದ. ವಾರದಿಂದ ದುಡಿದ ಹಣ ತಂದೆಯ ಆರೈಕೆಗೆ ಮುಗಿದು ಹೋಯಿತು. ಮುಂದಿನ ವಾರದವರೆಗೆ ಬದುಕುವುದು ಹೇಗೆಂದು ಚಿಂತೆಯಾಯಿತು.

"ಮುಂಗಡ ಒಂದಿಷ್ಟು ಹಣ ಕೇಳಿದರೆ ಮೇಸ್ತ್ರಿ ಕೊಡುತ್ತಾನೇನು?" ಬಸವರಾಜ ಹೆಂಡತಿಗೆ ಕೇಳಿದ.

"ವಾರದ ಕೊನೆಗೆ ಸಂತೆ ದಿನ ಕೊಡುವುದೇ ಕಷ್ಟವಾಗಿದೆ. ಇನ್ನು ಮುಂಗಡ ಎಲ್ಲಿಕೊಡುತ್ತಾನೆ. ನಮ್ಮ ಆನಂದನ ಶಾಲೆಯ ಡ್ರಸ್ ತರಲು ಮುಂಗಡ ಕೇಳಿದರೆ ಕೊಡಲಿಲ್ಲ. ಮಾವನೇ ಶೀನಪ್ಪನ ಅಂಗಡಿಯಲ್ಲಿ ಬಟ್ಟೆಯನ್ನು ಉದ್ರಿ ತಂದು ಹೊಲಿಸಲಿಲ್ಲವೆ?" ಎಂದು ಹೇಳಿದಳು. ಬಸವರಾಜನಿಗೆ ದಿಕ್ಕು ತೋಚಲಿಲ್ಲ. ಇವರ ಮಾತು ಕೇಳಿಸಿಕೊಂಡ ದೇವಪ್ಪ ಮಗನನ್ನು ಕರೆದ. "ನನಗಾಗಿ ಎಲ್ಲ ಹಣ ಖರ್ಚು ಮಾಡಿದಿರಿ. ಈಗ ಹೊಟ್ಟೆಗೇನು ತಿನ್ನುತ್ತೀರಿ? ಅದಕ್ಕಾಗಿ ಮೊದಲೇ ನಾನು ತೋರಿಸಿಕೊಳ್ಳಲು ಒಲ್ಲೆ ಅಂದದ್ದು. ಇನ್ನೆರಡು ದಿನದಲ್ಲಿ ಸರಿ ಹೋಗುತ್ತದೆ. ಅಂದರೆ ಕೇಳಲಿಲ್ಲ"

ಅಂದ ಬೇಸರದಿಂದ. ದೇವಪ್ಪನಿಗೂ ಚಿಂತೆಯಾಯಿತು. ಯೋಚಿಸಿ, "ಶೀನಪ್ಪನ ಅಂಗಡಿಗೆ ಹೋಗಿ ಕೇಳು. ನನ್ನ ಹೆಸರು ಹೇಳು. ವಾರಕ್ಕೆ ಬೇಕಾಗುವಷ್ಟು ಅಡಿಗೆ ಸಾಮಾನು ತಂದುಬಿಡು. ಮುಂದಿನ ವಾರ ಹಣಕೊಡುತ್ತೇನೆಂದು ಹೇಳು" ಅಂದ. "ಶೀನಪ್ಪ ಎಲ್ಲಿ ಉದ್ರಿ ಕೊಡುತ್ತಾನೆ? ಆನಂದನಿಗೆ ಬಟ್ಟೆ ತಂದದ್ದು ಬಾಕಿಯಿದೆ. ನೀನು ಮಾಡಿದ ಸಾಲದ ಹಣ ಕೊಡಬೇಕಾದದ್ದು ಹಾಗೇ ಇದೆ. ಈಗ ಕೇಳಿದರೆ ಬಯ್ಯದೆ ಬಿಡುವುದಿಲ್ಲ" ಅಂದ ಬಸವರಾಜ.

"ಬಯ್ಯುತ್ತಾನೆ ಅಂದರೆ ಹೇಗೆ? ಹೊಟ್ಟೆಗಿಲ್ಲದಾಗ ಎಲ್ಲ ಸಹಿಸಬೇಕು. ನನಗೆ ಜ್ವರ ಬಂದದ್ದು ಹೇಳು. ಮತ್ತು ಮುಂದಿನ ವಾರವೇ ಹಣ ಕೊಡುತ್ತೇವೆಂದು ಹೇಳು" ಎಂದ ದೇವಪ್ಪ. ತಂದೆಯ ಮಾತಿನಂತೆ ಕೈಯಲ್ಲಿ ಚೀಲ ಹಿಡಿದುಕೊಂಡು ಹೊರಟ. ನೀಲಮ್ಮ ಹೆಚ್ಚಿಗೇನೂ ಹೇಳಲಿಲ್ಲ. ತಂದಷ್ಟು ತರಲೆಂದು ಸುಮ್ಮನಾದಳು.

ಇವತ್ತು ಸಂತೆಯ ದಿನ. ಊರಿನ ಜನವೆಲ್ಲ ಸಂತೆಗೆಂದು ಬಂದಿದ್ದರು. ಅದಕ್ಕಾಗಿ ಗದ್ದಲವೇ ಗದ್ದಲವಿತ್ತು. ಎಲ್ಲರು ಹಣವಿಟ್ಟುಕೊಂಡು ಸಂತೆಗೆ ಹೋದರೆ ಬಸವರಾಜ ಬರಿಗೈಲೆ ಹೊರಟಿದ್ದ. ಮನಸ್ಸಿನಲ್ಲಿ ಅಳುಕಿತ್ತು. ಶೀನಪ್ಪನ ಅಂಗಡಿಯಲ್ಲಿ ಮತ್ತು ಮನೆಯಲ್ಲಿ ತಂದೆ ದೇವಪ್ಪ ಬಹಳ ವರ್ಷ ಕೆಲಸ ಮಾಡಿದ್ದ. ಅದಕ್ಕಾಗಿ ತಂದೆಯ ಮೇಲೆ ನಂಬಿಕೆ ಮತ್ತು ಪ್ರೀತಿ ಇರಬೇಕೆಂಬ ಧೈರ್ಯದಿಂದ ಶೀನಪ್ಪನ ಅಂಗಡಿಗೆ ಬಂದ. ಶೀನಪ್ಪ ಊರಿಗೆ ದೊಡ್ಡ ವ್ಯಾಪಾರಿ. ಕಿರಾಣಿ ಅಂಗಡಿ ಮತ್ತು ಬಟ್ಟೆಯ ಅಂಗಡಿ ಎರಡೂ ಆತನವೇ. ಎರಡು ಅಂಗಡಿಗಳೂ ಕೊಳ್ಳುವವರಿಂದ ತುಂಬಿ ಹೋಗಿತ್ತು. ಕಿರಾಣಿ ಅಂಗಡಿಯಲ್ಲಿ ಎತ್ತರದ ಮೇಲೆ ಕುಳಿತಿದ್ದ ಶೀನಪ್ಪನಿಗೆ ಅತ್ತ ಇತ್ತ ನೋಡಲು ಪುರುಸೊತ್ತು ಇರಲಿಲ್ಲ. ಗಿರಾಕಿಗಳ ಹಣ ಎಣಿಸಿಕೊಳ್ಳುವುದರಲ್ಲೇ ಮುಳುಗಿದ್ದ. ಕಿರಾಣಿ ಅಂಗಡಿಯಲ್ಲಿ ಸಾಮಾನುಗಳನ್ನು ತೂಗಿ, ಅಳೆದು ಕಟ್ಟಿಕೊಡುವುದರಲ್ಲಿ ಮೂರು ಹುಡುಗರಿಗೆ ಸಾಕಾಗಿ ಹೋಗಿತ್ತು. ಶೀನಪ್ಪನ ಪಕ್ಕದಲ್ಲಿ ರಾಮಣ್ಣ ಕುಳಿತಿದ್ದ. ಲೆಕ್ಕದ ಪುಸ್ತಕಗಳಲ್ಲಿ ಬರೆದುಕೊಳ್ಳುತ್ತಿದ್ದ. ಕೆಲವು ಖಾಯಂ ಗಿರಾಕಿಗಳು ಬಂದು

ರಾಮಣ್ಣನಲ್ಲಿ ಹಳೆ ಬಾಕಿಯ ಹಣ ಕಟ್ಟುತ್ತಿದ್ದರು. ರಾಮಣ್ಣ ಅವರ ಹಣ ತೆಗೆದುಕೊಂಡು, ಸಾಮಾನು ಕೊಡಲು ಹೇಳುತ್ತಿದ್ದ. ನಂತರ ಹೊಸ ಬಾಕಿಯನ್ನು ಪುಸ್ತಕದಲ್ಲಿ ಬರೆದು ಸಹಿ ಹಾಕಿಸಿಕೊಳ್ಳುತ್ತಿದ್ದ. ಸಹಿ ಮಾಡಲು ಬರದವರು ಹೆಬ್ಬೆರಳನ್ನು ಒತ್ತಿ ಹೋಗುತ್ತಿದ್ದರು. ಇದೆಲ್ಲವನ್ನು ನೋಡಿ ಬಸವರಾಜನಿಗೆ ಮತ್ತಷ್ಟು ಭಯವಾಯಿತು. ಉದ್ರಿ ಕೇಳುವುದಕ್ಕೆ ಧೈರ್ಯವೇ ಬರದಂತಾಯಿತು. ಆದರೂ ನಿಂತುಕೊಂಡಿದ್ದ. ಜನ ಕಡಿಮೆಯಾದ ಮೇಲೆ ಕೇಳಿದರಾಯಿತೆಂದು. ಶೀನಪ್ಪ ಗದ್ದಲದಲ್ಲಿಯೂ ಬಸವರಾಜನನ್ನು ನೋಡಿ,"ಬಾರಯ್ಯ, ಏನು ಬೇಕು. ದೂರ ಯಾಕೆ ನಿಂತುಕೊಂಡಿದ್ದಿ" ಎಂದು ಕರೆದು ಪುನಃ ತನ್ನ ವ್ಯಾಪಾರದಲ್ಲಿ ತೊಡಗಿದ. ಬಸವರಾಜ ಮುಖ ಸಪ್ಪಗೆ ಮಾಡಿಕೊಂಡು ನಿಂತಿದ್ದ. ಶೀನಪ್ಪ ಕರೆದಾಗ ಬೇಕೋ ಬೇಡೋ ನಕ್ಕು ಪುನಃ ಅಲ್ಲೆ ನಿಂತ. ಹೊತ್ತಾದಂತೆ ಗಿರಾಕಿಗಳು ಕಡಿಮೆಯಾಗತೊಡಗಿದರು. ಲೆಕ್ಕ ಬರೆಯುವ ರಾಮಣ್ಣನೂ ನೋಡಿ, "ಬಾರಯ್ಯ ಬಸವರಾಜ, ಏನು ಬೇಕು ತಗೋ" ಎಂದು ಕರೆದು ಪುನಃ ಲೆಕ್ಕ ಬರೆಯಲು ತಲೆ ಬಗ್ಗಿಸಿದ. ಬಸವರಾಜ ಮೆಲ್ಲಗೆ ಹತ್ತಿರ ಹೋಗಿ, "ಶೀನಪ್ಪಣ್ಣ, ನನಗೆ ಒಂದು ವಾರಕ್ಕೆ ಬೇಕಾಗುವಷ್ಟು ಅಕ್ಕಿ, ಜೋಳ, ಬೇಳೆ, ಎಣ್ಣೆ ಬೇಕಾಗಿತ್ತು" ಅಂದ ಮುಜುಗರ ಪಡುತ್ತಾ.

"ಅಂಗಡಿ ಯಾಕೆ ಇಟ್ಟಿದ್ದೇನೆ? ನಿಮ್ಮಂಥ ಗಿರಾಕಿಗಳಿಗೆ ಕೊಡುವುದಕ್ಕೆ ಅಲ್ಲವೇ?" ಅಂದ ಶೀನಪ್ಪ.

"ನಮ್ಮಪ್ಪ ಜ್ವರ ಬಂದು ಮಲಗಿದ್ದಾನೆ. ಡಾಕ್ಟರರಿಗೆ ತೋರಿಸಿ ಔಷಧ ಕೊಡಿಸಿದೆ. ದುಡಿದಿದ್ದ ವಾರದ ಹಣ ಅದಕ್ಕೆ ಖರ್ಚಾಯಿತು. ಈ ವಾರ ಹೊಟ್ಟೆಗೆ ಬೇಕಲ್ಲ..." ಎಂದು ಹೇಳುತ್ತಿದ್ದ. ಅಷ್ಟರಲ್ಲೇ ಶೀನಪ್ಪ ಮಧ್ಯ ಬಾಯಿ ಹಾಕಿ, "ಈಗ ಏನು ಸಂಗತಿ?" ಎಂದು ದಿಟ್ಟಿಸಿ ನೋಡಿದ.

"ಮುಂದಿನ ವಾರ ಹಣ ಕೊಡುತ್ತೇನೆ. ದಯವಿಟ್ಟು ಉದ್ರಿಗೆ ಸಾಮಾನು ಕೊಡು" ಅಂದ ಬಸವರಾಜ.

"ಗಂಡ-ಹೆಂಡತಿ ಮತ್ತು ನಿಮ್ಮಪ್ಪ ಎಲ್ಲರೂ ದುಡಿತೀರಿ. ನಿನ್ನ ಮಗನಿಗೆಂದು ತೆಗೆದುಕೊಂಡು ಹೋದ ಬಟ್ಟೆ ಬಾಕಿ ಹಾಗೇಯಿದೆ. ಮುಂದಿನ ವಾರ ಕೊಡುತ್ತೇನೆ ಅಂದಿದ್ದ ನಿಮ್ಮಪ್ಪ. ಆರು ತಿಂಗಳಾಯಿತು. ಮನೆಗೆ ಚಪ್ಪರ ಹಾಕಬೇಕು ಎಂದು ಸಾಲ ಮಾಡಿ ಮೂರು ವರ್ಷವಾಯಿತು. ಅದು ಹಾಗೇಯಿದೆ. ಎಷ್ಟು ಸಲ ಕೇಳಬೇಕು? ಇರಲಿ ದೇವಪ್ಪ ನಮ್ಮ ಮನುಷ್ಯ ಎಂದು ಸುಮ್ಮನೆ ಕೇಳುತ್ತ ಬಂದಿದ್ದೇನೆಯೇ ಹೊರತು ಜಬರದಸ್ತು ಮಾಡಿಲ್ಲ. ಇನ್ನು ನಿಮ್ಮಪ್ಪನಿಗೆ ವಯಸ್ಸಾಯಿತು."

"ನನಗೆ ಎಲ್ಲ ಗೊತ್ತಿದೆ. ಗಂಡ-ಹೆಂಡತಿ ನಾವು ದುಡಿದು ಮುಟ್ಟಿಸುತ್ತೇವೆ. ಈಗ ನಮ್ಮ ಅಪ್ಪನೇ ಹೇಳಿಕಳಿಸಿದ್ದಾನೆ."

"ಹಳೇ ಸಾಲ ಮುಟ್ಟಿಸಿ, ಬೇಕಾದರೆ ಸಾಮಾನು ತೆಗೆದುಕೊಂಡು ಹೋಗು" ಅಂದ ಶೀನಪ್ಪ ಮುಖ ತಿರುವಿ ಕುಳಿತ.

ಬಸವರಾಜ ಹೊಟ್ಟೆಯ ಸಲುವಾಗಿ ಅಂಗಲಾಚಿದ. ಆಗ ಶೀನಪ್ಪ ಬೇಕೋ ಬೇಡೋ, "ನಾಳೆ ಬಾ. ನೋಡೋಣ" ಅಂದ.

"ರಾತ್ರಿ ಊಟಕ್ಕೆ ಇಲ್ಲ ಶೀನಪ್ಪಣ್ಣ. ನಮ್ಮಪ್ಪ ಹಾಸಿಗೆ ಹಿಡಿದು ಮಲಗಿದ್ದಾನೆ" ಅಂದು ಬೇಡಿಕೊಂಡ.

"ಬಸವರಾಜ, ಮುಂದಿನ ವಾರ ಹಳೇ ಬಾಕಿ ಸಹಿತ ಕೊಡುತ್ತೀಯಾ?" ಎಂದು ಶೀನಪ್ಪ ಕೇಳಿದ.

"ನಾವು ದುಡಿದುದ್ದೆಲ್ಲ ತಂದು ಕೊಡ್ತೀವಿ. ಬಾಕಿ ಮುಟ್ಟುವತನಕ ಕೊಡ್ತೀನಿ" ಅಂದ. ಆಗ ಶೀನಪ್ಪ ಬೇಕೋ ಬೇಡೋ ಒಪ್ಪಿದಂತೆ ಕಂಡ.

"ಬಸವರಾಜ ತನಗೆ ಬೇಕಾದ ಕಿರಾಣಿ ಸಾಮಾನುಗಳನ್ನೆಲ್ಲ ಹೇಳಿದ. ಶೀನಪ್ಪ ಬರೆದುಕೊಂಡು ಸಾಮಾನು ಕೊಡಲು ಹೇಳಿದ. "ರಾಮಣ್ಣ, ದೇವಪ್ಪನ ಬಟ್ಟೆ ಬಾಕಿ

ಮತ್ತು ಹಳೆ ಸಾಲ ತೆಗೆದು ನೋಡು'' ಎಂದು ಏನೇನೋ ಸನ್ನೆ ಮಾಡಿದ. ಬಸವರಾಜನಿಗೆ ಕಿರಾಣಿ ಸಾಮಾನು ದೊರೆತದ್ದರಿಂದ ಸಂತೋಷವಾಗಿ ಚೀಲದಲ್ಲಿ ಹಾಕಿಕೊಳ್ಳುತ್ತಿದ್ದ.

''ಇವತ್ತಿನ ಬಾಕಿ ಒಂದು ನೂರ ಅರವತ್ತು ರೂಪಾಯಿ. ನೋಡಿ ಸಹಿ ಮಾಡು'' ಎಂದು ಶೀನಪ್ಪ ಲೆಕ್ಕದ ಪುಸ್ತಕ ಕೊಟ್ಟ. ಬಸವರಾಜ ಅದರಲ್ಲಿ ತನ್ನ ಹೆಸರು ಬರೆದು ಮರಳಿ ಕೊಟ್ಟ.

''ರಾಮಣ್ಣ, ಇವರ ತಂದೆಯ ಒಟ್ಟು ಸಾಲ ಎಷ್ಟಿದೆ ನೋಡಿ ಬರೆದು ಕೊಡು'' ಎಂದ ಶೀನಪ್ಪ. ರಾಮಣ್ಣ ಬರೆದಿಟ್ಟಿದ್ದ. ಅದನ್ನು ತೆಗೆದುಕೊಂಡು ಅದರಲ್ಲಿ ಏನೇನೋ ಬರೆದು, ''ನಿಮ್ಮ ತಂದೆ ಕೊಡಬೇಕಾದ ಸಾಲ ಇಲ್ಲಿದೆ. ಇದಕ್ಕೊಂದು ಸಹಿ ಮಾಡು'' ಎಂದ ಶೀನಪ್ಪ. ಬಸವರಾಜ ಸಹಿ ಹಾಕಲು ಹಿಂಜರಿದ. ''ನಮ್ಮಪ್ಪನ ಸಾಲ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ. ಕೇಳಿ ಬಂದು ಸಹಿ ಮಾಡುತ್ತೇನೆ'' ಎಂದ. ಶೀನಪ್ಪನಿಗೆ ಸಿಟ್ಟು ಬಂತು. ತೋರಿಸಿಕೊಳ್ಳದೆ ''ನಾನು ಸುಳ್ಳು ಲೆಕ್ಕ ಬರೆದು ಸಹಿ ಮಾಡಿಸಿಕೊಳ್ಳುತ್ತೇನೆ ಅಂದುಕೊಂಡೆಯಾ?'' ಎಂದು ಕೇಳಿದ.

''ನಮ್ಮಪ್ಪನೇ ಬಂದು ಸಹಿ ಮಾಡುತ್ತಾನೆ. ಜ್ವರ ಕಡಿಮೆಯಾದ ಕೂಡಲೇ ಕಳಿಸುತ್ತೇನೆ'' ಅಂದ ಬಸವರಾಜ.

''ನಿಮ್ಮ ಮೇಲೆ ನಂಬಿಕೆಯಿಟ್ಟು ನಾನು ಸಾಲ ಕೊಟ್ಟಿದ್ದೇನಲ್ಲ. ಅದೇ ನಂಬಿಕೆ ನನ್ನ ಮೇಲೆ ನಿಮಗಿಲ್ಲ, ಅಲ್ಲವೆ?''

''ಹಾಗಲ್ಲ, ಶೀನಪ್ಪಣ್ಣ...''

''ಈಗಲೇ ಬಹಳ ದಿನವಾಯಿತು. ನಿಮ್ಮ ತಂದೆಗೆ ವಯಸ್ಸಾಯಿತು. ಆಮೇಲೆ ಕೇಳಿದರೆ ಮರೆತು, ಅಷ್ಟು ಬಾಕಿ ಎಲ್ಲಿ ಉಳಿದಿತ್ತು? ಅಂತ ತಕರಾರು ತೆಗೆಯುತ್ತೀರಿ. ನಾನು ಸಾಲ ಕೊಡಬೇಕು. ಪುನಃ ನಿಮ್ಮಿಂದ ಬಯ್ಯಿಸಿಕೊಳ್ಳಬೇಕು.''

''ಹಾಗೆ ಎಂದಾದರೂ ಮಾಡಿದ್ದೀನಾ...''

"ಈಗಲೇ ಬಹಳ ದಿನವಾಯಿತು. ಮರೆಯಬಹುದು ಅಂತ ದಣಿ ಹೇಳುತ್ತಾನೆ; ಬಸವರಾಜ. ನಿಮ್ಮಪ್ಪನ ಸಾಲದ ಲೆಕ್ಕಕ್ಕೆ ನೀನು ಸಹಿ ಮಾಡಬೇಡ. ನಿಮ್ಮಪ್ಪನಿಗೆ ಸಹಿ ಮಾಡಲು ಬರುವುದಿಲ್ಲ. ಬದಲಾಗಿ ಹೆಬ್ಬೆರಳನ್ನು ಒತ್ತುತ್ತಿದ್ದ. ಈಗ ನಿಮ್ಮಪ್ಪನ ಬದಲು ನೀನೇ ಹೆಬ್ಬೆರಳನ್ನು ಒತ್ತಿ ಸಹಿ ಮಾಡು" ಎಂದು ರಾಮಣ್ಣ ಮಧ್ಯ ಬಂದು ಹೇಳಿದ.

ಬಸವರಾಜನಿಗೆ ಅದು ಸರಿ ಅನ್ನಿಸಿತು. ಹೆಬ್ಬೆರಳಿಗೆ ರಾಮಣ್ಣ ಮಸಿ ಹಚ್ಚಿದ. ಅದನ್ನು ಲೆಕ್ಕದ ಪುಸ್ತಕದಲ್ಲಿ ಒತ್ತಿದ. ನಂತರ ಅಂಗಡಿಯಿಂದ ಸಾಮಾನು ಹೊತ್ತುಕೊಂಡು ಮನೆಗೆ ಬಂದ.

ಬಸವರಾಜ ಅಡಿಗೆಗೆ ಸಾಮಾನು ತಂದದ್ದು ನೋಡಿ ನೀಲಮ್ಮನಿಗೆ ಸಂತೋಷವಾಯಿತು. ಶೀನಪ್ಪ ಉದ್ರಿಕೊಟ್ಟನಲ್ಲ ಎಂದು ದೇವಪ್ಪನಿಗೆ ನೆಮ್ಮದಿಯಾಯಿತು. ರಾತ್ರಿ ಎಲ್ಲರೂ ಊಟ ಮಾಡಿ ಮಲಗಿದರು.

☛ ☛ ☛

ಮರುದಿನ ಬಸವರಾಜ ಕೂಲಿ ಕೆಲಸ ಮುಗಿಸಿಕೊಂಡು ಹೆಂಡತಿಯ ಜತೆ ಬಂದ. ತಂದೆಗೆ "ನೀನು ಮಾಡಿದ ಸಾಲಕ್ಕೆ ಸಹಿ ಮಾಡಿ ಬಂದಿದ್ದೀನಿ" ಅಂದ.

"ನನ್ನ ಹಳೇ ಸಾಲ ಎಷ್ಟಿತ್ತು" ಎಂದು ದೇವಪ್ಪ ಕೇಳಿದ.

"ನಾನು ನೋಡಲಿಲ್ಲ. ಆತನೂ ಹೇಳಲಿಲ್ಲ. ಮೊದಲು ಸಹಿ ಮಾಡಲು ಮುಂದಾಗಲಿಲ್ಲ. ಸಹಿ ಬೇಡ ನಿಮ್ಮ ತಂದೆಯ ಬದಲು ಹೆಬ್ಬೆರಳು ಒತ್ತು ಎಂದರು" ಅಂದ.

"ಸರಿ ಬಿಡು. ಎಷ್ಟು ಅಂತ ನೋಡಬೇಕಾಗಿತ್ತು" ಅಂದು ಸುಮ್ಮನಾದ.

ಇದನ್ನು ಕೇಳಿದ ನೀಲಮ್ಮ, "ಮಾವನ ಬದಲು ನೀನು ಹೆಬ್ಬೆರಳು ಒತ್ತಿದರೆ ಅದು ಮಾವನ ಸಹಿ ಆಗುವುದಿಲ್ಲ. ಅದು ನಿನ್ನ ಸಹಿ ಆಗುತ್ತದೆ" ಅಂದಳು.

ತಂದೆ, ಮಗ ಇಬ್ಬರಿಗೆ ಅನುಮಾನ ಶುರುವಾಯಿತು. ಗಾಬರಿಯಾದರು. ಅದು ನಿಜವೋ ಸುಳ್ಳೋ ತಿಳಿಯದಾಯಿತು. ಹೆಬ್ಬೆರಳು ಯಾರದಾದರೇನು? ಎಂದು ಯೋಚಿಸಿದರು.

"ಸರಿಯೋ ತಪ್ಪೋ ಬೇಕಾದರೆ ನಮ್ಮ ಕೇರಿಯಲ್ಲಿ ಓದಿಕೊಂಡಿರುವ ಶಿವರಾಜ ಇದ್ದಾನಲ್ಲ ಕರೆದು ಕೇಳಿರಿ" ಎಂದು ನೀಲಮ್ಮನೇ ಹೇಳಿದಳು. ದೇವಪ್ಪನಿಗೆ ಜ್ವರ ಬಂದಿದ್ದರಿಂದ ಹೋಗಲು ತೊಂದರೆ ಆಯಿತು. ಬಸವರಾಜನೇ ಹೋಗಿ ಶಿವರಾಜನನ್ನು ಕರೆದುಕೊಂಡು ಬಂದ.


"ಹೆಬ್ಬೆರಳು ಯಾರು ಒತ್ತಿ ಸಹಿ ಮಾಡಿರುತ್ತಾರೋ ಅದು ಅವರದೇ ಸಹಿಯಾಗುತ್ತದೆ. ಹೆಬ್ಬೆರಳ ಗುರುತು ಯಾರದೆಂದು ಕಂಡು ಹಿಡಿಯಲು ಬರುತ್ತದೆ. ಮತ್ತು ಹೆಬ್ಬೆರಳು ಒತ್ತಿದ ಮೇಲೆ ಅದರ ಕೆಳಗೆ ಒತ್ತಿದವರ ಹೆಸರು ಬರೆಯಲಾಗುತ್ತದೆ" ಎಂದು ಶಿವರಾಜ ಹೇಳಿದ.

"ನನಗೆ ಇದು ತಿಳಿಯಲಿಲ್ಲ" ಎಂದ ಬಸವರಾಜ.

"ಬಸವರಾಜ, ನನ್ನ ಜೊತೆಗೆ ನೀನೂ ಐದನೆಯ ತರಗತಿವರೆಗೆ ಓದಿದ್ದಿ. ನಾನು ಓದು ಮುಂದುವರೆಸಿದೆ. ನಿನಗೆ ಆಗಲಿಲ್ಲ. ಬಡತನ ಕಾರಣವಿದೆ. ಆದರೂ ಓದಿದ್ದನ್ನು ಮರೆಯದೆ ಹಾಗೆ ಅದೂ ಇದೂ ಓದುತ್ತ ಜ್ಞಾನ ಬೆಳೆಸಿಕೊಂಡಿರಬೇಕು. ನೀನು ಐದನೆ ತರಗತಿಯವರೆಗೆ ಓದಿ ಈಗ ಬರೀ ನಿನ್ನ ಹೆಸರು ಬರೆದು ಸಹಿ ಮಾಡುವ ಮಟ್ಟಿಗೆ ವಿದ್ಯೆ ಉಳಿಸಿಕೊಂಡಿದ್ದಿ. ನೋಡು, ನಿನ್ನ ತಂದೆ ಏನೂ ಓದಿಲ್ಲ. ನಿನ್ನ ಹೆಂಡತಿಯೂ ಏನೂ ಓದಿಲ್ಲ. ಆದರೂ ಅವರು ಜಾಣರು. ನಿನ್ನ ಹೆಂಡತಿ ಎಷ್ಟು ಜಾಣೆಯಾಗಿದ್ದಾಳೆ ಅಲ್ಲವೆ? ಅಕ್ಷರ ಕಲಿತವರಷ್ಟೇ ಬುದ್ಧಿವಂತರಲ್ಲ. ನೀಲಮ್ಮನಿಗೆ ಅಕ್ಷರ ಬಂದಿದ್ದರೆ ಹೇಗಿತ್ತು, ಯೋಚಿಸು" ಎಂದು ಹೇಳಿದ ಶಿವರಾಜ.

"ಈಗ ಶೀನಪ್ಪ ಬಸವರಾಜನಿಂದ ಸಹಿ ಹಾಕಿಸಿಕೊಂಡಿದ್ದಾನೆ. ಅಂದರೆ ತಂದೆಯ ಸಾಲ ಮಗ ಕೊಡುತ್ತಾನೆ - ಎಂದು ಸಾಕ್ಷಿ ಮಾಡಿಸಿಕೊಂಡಂತೆ ಆಯಿತು ಅಲ್ಲವೆ?" ದೇವಪ್ಪ ಕೇಳಿದ.

"ಅಷ್ಟೇ ಅಲ್ಲ. ದೇವಪ್ಪ, ನೀನು ಎಷ್ಟು ಸಾಲ ಮಾಡಿದ್ದಿಯೋ ಏನೋ! ಶೀನಪ್ಪ ಅದರಲ್ಲಿ ಹೆಚ್ಚು ಬರೆದು ಬಸವರಾಜನಿಂದ ಸಹಿ ಮಾಡಿಸಿಕೊಂಡಿರಬಹುದು" ಶಿವರಾಜ ಹೇಳಿದಾಗ ತಂದೆ, ಮಗ ಇಬ್ಬರೂ ಹೆದರಿದರು.



ಹಳ್ಳಿಗರು ಲಿಂಗಣ್ಣನನ್ನು ಬೀಳ್ಕೊಟ್ಟರು

"ಕೂಡಲೇ ಏನಾಗಿದೆಯೋ ನೋಡಿ ಬನ್ನಿರಿ" ಎಂದು ನೀಲಮ್ಮ ಹೇಳಿದಳು.

ದೇವಪ್ಪನಿಗೆ ಜ್ವರ ಬಂದಿದ್ದರಿಂದ ಹೋಗಲಾಗಲಿಲ್ಲ: "ನಾನು ಮಾಡಿದ ಸಾಲ ಮುನ್ನೂರು ರೂಪಾಯಿ. ಆನಂದನಿಗೆ ಬಟ್ಟೆ ತಂದ ಬಾಕಿ ಅರವತ್ತು ರೂಪಾಯಿ. ಇದಿಷ್ಟೇ ನನ್ನ ಸಾಲ" ಎಂದು ಹೇಳಿದ.

ಶಿವರಾಜ, ಬಸವರಾಜ ಇಬ್ಬರು ಶೀನಪ್ಪನ ಅಂಗಡಿಗೆ ಬಂದರು. ಲೆಕ್ಕದ ಪುಸ್ತಕ ತೆರೆದು ತೋರಿಸಲು ಶೀನಪ್ಪ ಹಿಂದು ಮುಂದು ನೋಡಿದ. ರೇಗಾಡಿದ. ಶಿವರಾಜನ ಒತ್ತಾಯಕ್ಕೆ ತೆಗೆದು ತೋರಿಸಿದ. ಮೂರು ನೂರಾ ಅರವತ್ತು ರೂಪಾಯಿಗೆ ಬದಲು ಏಳೂವರೆ ನೂರು ಬಾಕಿ ಬರೆದಿದ್ದ. ತಕರಾರು ತೆಗೆದರು. "ದೇವಪ್ಪ ಸಾಲ ಮಾಡಿ ಮೂರು ವರ್ಷವಾಯಿತು. ಅದಕ್ಕೆ ಬಡ್ಡಿ ಸೇರಿಸಿದರೆ ಇಷ್ಟಾಗಿದೆ" ಎಂದು ಶೀನಪ್ಪ ಕೂಗಾಡಿದ. ಶಿವರಾಜ, ಬಸವರಾಜನ ಜೊತೆಗೆ ಶೀನಪ್ಪ ಬಹಳ ಹೊತ್ತು ತಕರಾರು ಮಾಡತೊಡಗಿದ. ಅಷ್ಟೊತ್ತಿಗೆ ದೇವಪ್ಪ ಮೆಲ್ಲಗೆ ಬಂದು ಸೇರಿದ. ಶೀನಪ್ಪನ ಅವ್ಯವಹಾರ ಕಂಡು ದೇವಪ್ಪ ಹೇಳಿದ. "ನಾನು ಮುನ್ನೂರು ಸಾಲ ತೆಗೆದುಕೊಳ್ಳುವಾಗ ಬಡ್ಡಿಗಾಗಿ ತೆಗೆದುಕೊಂಡಿರಲಿಲ್ಲ" ಎಂದ. ಕೊನೆಗೆ ಶೀನಪ್ಪ ಹಿಂದಕ್ಕೆ ಸರಿದುಕೊಂಡು, "ಮೂರು ನೂರ ಅರವತ್ತು ರೂಪಾಯಿಯನ್ನೇ ಬೇಗ ಕೊಡಿರಿ" ಎಂದು ಸಟೆದು ಹೇಳಿದ. ದೇವಪ್ಪ, ಶಿವರಾಜ, ಬಸವರಾಜ ಮನೆಗೆ ಮರಳಿದರು.

೩. ಬಡವರಿಗೊಂದು ಬೆಳಕಿನ ದಾರಿ

"ರವಿಗೆ ಎರಡು ಸಲ ವಾಂತಿಯಾಯಿತು. ಈಗ ಭೇದಿ ಶುರುವಾಗಿದೆ" ಎಂದು ಲಿಂಗಣ್ಣನವರಿಗೆ ಅವರ ಹೆಂಡತಿ ಹೇಳಿದಳು. ಕೂಡಲೇ ಅವರು "ನಿಂಬೆಹಣ್ಣಿನ ರಸದಲ್ಲಿ ಸಕ್ಕರೆ ಕಲೆಸಿ, ತಾಸಿಗೆ ಒಮ್ಮೆ ಕುಡಿಸು. ಮೂರು ನಾಲ್ಕು ಸಲ ಕುಡಿಸಿದರೆ ಕಡಿಮೆಯಾಗುತ್ತದೆ" ಎಂದು ಹೆಂಡತಿಗೆ ಹೇಳಿದರು.

ಲಿಂಗಣ್ಣನವರು ಸಣ್ಣಪುಟ್ಟ ಕಾಯಿಲೆಗಳಿಗೆ ದವಾಖಾನೆಗೆ ಕರೆದುಕೊಂಡು ಹೋಗುತ್ತಿರಲಿಲ್ಲ. ಡಾಕ್ಟರರಿಗೆ ತೋರಿಸುವುದು, ಅವರು ಸೂಚಿಸುವ ಔಷಧವನ್ನು ಸೇವಿಸುವುದು ಸರಿಬರುತ್ತಿರಲಿಲ್ಲ. ಅದಕ್ಕೆ ಬದಲಾಗಿ ಲಿಂಗಣ್ಣನವರೇ ಕೆಲವು ಕಾಯಿಲೆಗಳಿಗೆ, ಎಲ್ಲರಿಗೆ ಪರಿಚಯವಿರುವ ಮತ್ತು ಸುಲಭವಾಗಿ ಸಿಗುವ ವಸ್ತುಗಳಿಂದಲೇ ಔಷಧ

ಮಾಡಿ ಕೊಡುತ್ತಿದ್ದರು. ಇದರಿಂದ ಬಹಳ ಖರ್ಚಿಲ್ಲದೆ ಸಣ್ಣ ಸಣ್ಣ ಕಾಯಿಲೆಗಳನ್ನು ಗುಣಪಡಿಸುತ್ತಿದ್ದರು. ಈ ಕಾರಣದಿಂದ ಲಿಂಗಣ್ಣನವರು ಎಲ್ಲರಿಗೂ ಬೇಕಾದವರಾಗಿದ್ದರು. ಈ ಹಳ್ಳಿಗೆ ಅವರು ಹಿರಿಯರು, ಉದಾರಿಗಳೂ ಆಗಿದ್ದರು. ಹೆಂಡತಿ, ಮೂರು ಮಕ್ಕಳೊಡನೆ ಅವರು ವ್ಯವಸಾಯ ಮಾಡಿಕೊಂಡಿದ್ದರು.

''ಮನೆಯಲ್ಲಿ ನಿಂಬೆಹಣ್ಣು ಇಲ್ಲ. ತಂದುಕೊಡಿ'' ಎಂದಳು ಅವರ ಹೆಂಡತಿ. ಅವರಿಗೆ ತಕ್ಷಣ ಹುಸೇನಮ್ಮ ನೆನಪಾದಳು. ''ತಂದು ಕೊಡುತ್ತೇನೆ'' ಎಂದು ಹೇಳಿ ಹೊರಟರು.

ಹುಸೇನಮ್ಮನ ಗುಡಿಸಲು ಇರುವುದು ಊರ ಹಿಂದಿನ ಕೇರಿಯಲ್ಲಿ. ಲಿಂಗಣ್ಣನವರಿಗೆ ಐದಾರು ವರ್ಷಗಳ ಹಿಂದೆ ಒಂದು ಯೋಚನೆ ಹೊಳೆಯಿತು. ಕೇರಿಯಲ್ಲಿರುವ ಜನರಿಗೆ ಅಕ್ಷರ ಕಲಿಸಬೇಕೆಂದು. ಅದರಂತೆ ಕೇರಿಯಲ್ಲಿರುವ ಹಲವಾರು ಮಂದಿಗೆ ಅಕ್ಷರವನ್ನು ಕಲಿಸಲು ಒಂದೆರಡು ವರ್ಷ ಅವರು ಪ್ರಯತ್ನಿಸಿದ್ದರು. ಪ್ರೀತಿಯಿಂದ ಅಕ್ಷರ ಕಲಿಸಿದ್ದರು. ಎಲ್ಲರಿಗೂ ಓದಲು ಮತ್ತು ಬರೆಯಲು ಬರುವಂತೆ ಶ್ರಮಿಸಿದ್ದರು. ಇವರಿಂದ ಅಕ್ಷರ ಕಲಿತು ಕೇರಿಯ ಮಂದಿ ಸಾಕ್ಷರರಾಗಿದ್ದರು. ಅಲ್ಲದೆ ಸುತ್ತಲೂರಿಗೆ ಮಾದರಿಯಾಗಿದ್ದರು.

ಲಿಂಗಣ್ಣನವರು ಬಹಳ ದಿನಗಳಿಂದ ಕೇರಿ ಕಡೆ ಬಂದಿರಲಿಲ್ಲ. ಸಾಕ್ಷರರಾದವರೇ ಆಗಾಗ ಅವರ ಮನೆಗೆ ಬಂದು ಹೋಗುತ್ತಿದ್ದರು. ಕೇರಿಗೆ ಬರುತ್ತಿದ್ದಂತೆ ಮನಸ್ಸಿಗೆ ಸಂತೋಷವಾಗತೊಡಗಿತು. ಅದಕ್ಕೆ ಕಾರಣ ಕೇರಿಯಲ್ಲಿ ಗಿಡಮರಗಳು ಕಾಣಿಸುತ್ತಿದ್ದವು. ದೊಡ್ಡ ದೊಡ್ಡ ಮರಗಳು ಇಲ್ಲದಿದ್ದರೂ, ಸಾಕಷ್ಟು ಬೆಳೆದ ಗಿಡಗಳು ಕೇರಿಯಲ್ಲಿದ್ದವು. ಅವರು ಅಕ್ಷರ ಕಲಿಸಲು ಬರುತ್ತಿದ್ದಾಗ ಗಿಡಮರಗಳೇ ಇರಲಿಲ್ಲ. ಅವರವರ ಗುಡಿಸಲುಗಳ, ಮನೆಗಳ ಸುತ್ತಮುತ್ತ ಬೇಕಾದಷ್ಟು ಸ್ಥಳವಿದ್ದರೂ ಅದನ್ನು ಉಪಯೋಗಿಸಿಕೊಳ್ಳದೆ ಹಾಗೆ ಖಾಲಿ ಬಿಟ್ಟಿದ್ದರು. ಅಲ್ಲೆಲ್ಲ ಬರಿ ಹೊಲಸು ತುಂಬಿತ್ತು. ಈಗ ನೂರಾರು ಗಿಡಗಳನ್ನು ಕಂಡು ಲಿಂಗಣ್ಣನವರಿಗೆ ಆನಂದವಾಯಿತು. ಹುಸೇನಮ್ಮನ ಗುಡಿಸಲ ಮುಂದೆ

ಬರುವ ಹೊತ್ತಿಗೆ ಅಕ್ಕಪಕ್ಕದವರು ಬಂದು ಮಾತಾಡಿಸಿದರು. ಹುಸೇನಮ್ಮನು ಹೊರ ಬಂದು ನೋಡಿ, "ಬನ್ನಿರಿ" ಎಂದು ಕರೆದಳು. ಗುಡಿಸಲ ಮುಂದಿದ್ದ ಕಟ್ಟೆಯ ಮೇಲೆ ಕೂಡಲು ಹಾಸಿದಳು. "ಹೇಳಿ ಕಳಿಸಿದ್ದರೆ ನಾನೇ ಬರುತ್ತಿದ್ದೆ" ಅಂದಳು.

"ನಾನು ಬಂದುದ್ದಕ್ಕೆ ಕೇರಿ ನೋಡುವಂತಾಯಿತು. ತುಂಬ ಬದಲಾಗಿದೆ" ಅಂದರು.

"ಇದೆಲ್ಲ ನಿಮ್ಮಿಂದಲೇ ಆದದ್ದು."

ಲಿಂಗಣ್ಣನವರು ಗುಡಿಸಲು ಸುತ್ತ ತಿರುಗಾಡಿದರು. ಎರಡು ನಿಂಬೆಗಿಡಗಳು, ಒಂದು ಮಾವಿನ ಗಿಡ, ಒಂದು ನುಗ್ಗೇಗಿಡ, ಆರೇಳು ತೆಂಗಿನ ಗಿಡಗಳು ಬೆಳೆದು ನಿಂತಿವೆ. ಗುಡಿಸಲ ಹಿಂದೆ ಒಂದು ಕರಿಬೇವಿನ ಗಿಡ ದಟ್ಟವಾಗಿ ಬೆಳೆದಿತ್ತು. "ಎರಡು ವರ್ಷದಿಂದ ನಿಂಬೆಹಣ್ಣು, ನುಗ್ಗೇಕಾಯಿ, ಕರಿಬೇವು ಮಾರಿ ಬದುಕುತ್ತಿದ್ದೇನೆ" ಅಂದಳು ಹುಸೇನಮ್ಮ. "ಈಗ ಚೆನ್ನಾಗಿದ್ದೀಯಲ್ಲ?" ಲಿಂಗಣ್ಣ ಕೇಳಿದರು.

"ಚೆನ್ನಾಗಿದ್ದೇನೆ. ಮಗ, ಸೊಸೆ ಕೂಲಿ ಕೆಲಸಕ್ಕೆ ಹೋಗುತ್ತಾರೆ. ನಾನು ಇದಕ್ಕೆ ನಿಂತಿದ್ದೇನೆ" ಅಂದಳು.

ತೆಂಗಿನ ಮರಗಳಿಂದ, ಮಾವಿನ ಮರದಿಂದಲೂ ಉತ್ಪನ್ನ ಬರುವುದನ್ನು ನೋಡಿ ಹಿಗ್ಗಿದರು. ಅವರು, ಕೇರಿಗೆ ಬಂದ ಜನರಿಗೆ ಅಕ್ಷರ ಕಲಿಸಲು ನಿಂತಾಗ ಮೊದಮೊದಲು ಯಾರೂ ಉತ್ಸಾಹ ತೋರಿಸಲಿಲ್ಲ. ಲಿಂಗಣ್ಣನವರು ಪ್ರೀತಿ ಜವಾಬ್ದಾರಿಯಿಂದ ಎಲ್ಲರ ಗುಡಿಸಲಿಗೆ ಹೋಗಿ ಅಕ್ಷರದ ಮಹತ್ವ ತಿಳಿಸಿದ್ದರು. ಎಲ್ಲರನ್ನು ಕೂಡಿಸಿ ಅಕ್ಷರ ಕಲಿಸಿದ್ದರು. ಜೊತೆಗೆ ಕೇರಿಯಲ್ಲಿ ವಯಸ್ಸಾಗುತ್ತ ಬಂದವರಿಗೆ, ಭಾರವಾದ ದುಡಿಮೆ ಸಾಧ್ಯವಾಗುತ್ತಿರಲಿಲ್ಲ. ಅಂಥವರಿಗೆ ಲಿಂಗಣ್ಣನವರು ಬದುಕುವ ಸುಲಭವಾದ ದಾರಿಯನ್ನು ತೋರಿಸಿದ್ದರು. ಅದಕ್ಕಾಗಿಯೇ ಹಲವು ಯೋಜನೆಗಳನ್ನು ಸೂಚಿಸಿದ್ದರು. ಇವು ಅವರಿಗೆ ಬದುಕಲು ಆಸರೆಯಾಗುವ ರೀತಿಯಲ್ಲೇ ಇದ್ದವು. ಅದರ ಫಲವೇ

ಈಗ ಹುಸೇನಮ್ಮನ ಬದುಕು ಈ ರೀತಿಯಲ್ಲಿರುವುದಕ್ಕೆ ಕಾರಣವಾಗಿತ್ತು. ಕೇರಿಯಲ್ಲಿ ಒಳ್ಳೆಯ ಪರಿಸರ ನಿರ್ಮಾಣವಾಗಬೇಕು. ಎಲ್ಲರೂ ದೈಹಿಕ ಮತ್ತು ಮಾನಸಿಕ ಆರೋಗ್ಯದಿಂದಿರಬೇಕೆಂದು ಅವರು ಬಯಸಿದ್ದರು. ಲಿಂಗಣ್ಣನವರೇ ಎಲ್ಲರಿಗೆ ಉಪಜೀವನಕ್ಕೆ ಬರುವ ತೆಂಗಿನಸಸಿ, ಮಾವಿನಸಸಿ, ನಿಂಬೆಸಸಿ, ಕರಿಬೇವಿನಸಸಿ, ನುಗ್ಗೇಸಸಿ ಮುಂತಾದವುಗಳನ್ನು ಕೇರಿಯ ಜನರಿಗೆ ದೊರಕಿಸಿಕೊಟ್ಟಿದ್ದರು.

"ಹುಸೇನಮ್ಮ, ಉಳಿದವರು ಏನೇನು ಮಾಡಿಕೊಂಡಿದ್ದಾರೆ ನೋಡೋಣ ಬಾ" ಎಂದು ಕರೆದರು.

ಶಂಕರಪ್ಪನ ಚಿಕ್ಕಮನೆಗೆ ಬಂದರು. ಆತನ ಕಾಲು ಊನ. ದುಡಿಯುವುದಕ್ಕೆ ಆ ಕಾಲು ಅಡ್ಡಿಯಾಗಿತ್ತು. ಆದರೂ ಹೇಗೋ ದುಡಿದು ಬದುಕುತಿದ್ದ. ಇರುವ ಸ್ವಲ್ಪ ಜಾಗದಲ್ಲಿ ಸಪೋಟಾ, ಸೀಬೆ ಗಿಡಗಳನ್ನು ಬೆಳೆಸಿದ್ದ. ಎರಡು ವರ್ಷದಿಂದ ಹಣ್ಣು ಮಾರಿಯೇ ಬದುಕುತ್ತಿದ್ದ.

"ನೀನೇ ಹಣ್ಣು ಹೊತ್ತು ಮಾರುತ್ತೀಯಾ?" ಲಿಂಗಣ್ಣನವರು ಕೇಳಿದರು.

"ನನ್ನ ಕಾಲು ಸರಿಯಿಲ್ಲ. ಹನುಮವ್ವನಿಗೆ ಮಾರುತ್ತೇನೆ. ಆಕೆ ಬುಟ್ಟಿಯಲ್ಲಿ ಹೊತ್ತು ಮಾರುತ್ತಾಳೆ."

"ಅಂದರೆ ಆಕೆಗೂ ನಿನ್ನಿಂದ ಕೆಲಸವಿದೆ. ಅಲ್ಲವೆ?"

"ಹೌದು." ಎಂದ ಶಂಕರಪ್ಪ. ಲಿಂಗಣ್ಣನವರನ್ನು ನೋಡಿ ಹನುಮವ್ವ ಬಂದು ನಿಂತಳು. ಆಕೆಯನ್ನು ನೋಡಿ, "ಆರಾಮಿದ್ದೀಯಾ ಹನುಮವ್ವ" ಎಂದು ಕೇಳಿದರು.


"ಆರಾಮಿದ್ದೇನೆ" ಅಂದಳು ಸಂತೋಷದಿಂದ. ಹನುಮವ್ವನು ನಾಲ್ಕು ವರ್ಷದ ಹಿಂದೆ ಒಂದು ಆಕಳು ಕೊಂಡುಕೊಂಡಿದ್ದಳು. ಅದರ ಹಾಲು ಮಾರಿ ಬದುಕುವುದೂ ಅಲ್ಲದೆ, ಈ ವರ್ಷದ ಹೊತ್ತಿಗೆ, ಆಕೆಯ ಮನೆಯಲ್ಲಿ ಎರಡು ಆಕಳು ನಿಂತಿದ್ದವು.

ಒಂದು ಎಮ್ಮೆಯನ್ನು ಕೊಂಡುಕೊಂಡಿದ್ದಳು. ಹೈನ ಹೆಚ್ಚಿಸಿಕೊಂಡು ಸಂಪಾದಿಸಿದ್ದಳು. ಅದೆಲ್ಲವನ್ನು ಹೇಳಿ "ನನ್ನ ಜೊತೆಗೆ ಗಂಡ ಸರಿಯಾಗಿ ದುಡಿಯುವುದಿಲ್ಲ" ಎಂದು ಅಸಮಾಧಾನ ವ್ಯಕ್ತಪಡಿಸಿದಳು. ಲಿಂಗಣ್ಣನವರು ಹನುಮವ್ವನ ಗಂಡನನ್ನು ಕರೆದು ತಿಳುವಳಿಕೆ ನೀಡಿದರು.

"ಹೆಣ್ಣು ಮಕ್ಕಳು ದುಡಿಯುತ್ತಿರುವಾಗ ನೀನು ಕುಳಿತು ತಿಂದರೆ ಹೇಗೆ?" ಎಂದು ಕೇಳಿದರು.

"ಕೆಲಸ ಮಾಡುತ್ತೇನೆ" ಎಂದು ಹೇಳಿದರೂ, ಲಿಂಗಣ್ಣನವರು ಬಯ್ದರು.

"ಆಕೆ ದನಕರ ಮಾಡಿದ್ದಾಳೆ. ಅವುಗಳ ಹೆಂಡೆ ಕೂಡಿಟ್ಟು ಗೊಬ್ಬರ ಮಾಡಿದರೆ ಅದರಿಂದಲೂ ಗಳಿಕೆಯಿದೆ" ಎಂದೆಲ್ಲ ಹೇಳಿದರು. ಕೇರಿಯಲ್ಲಿ ಸಾಬಮ್ಮ, ಸೋಮಯ್ಯ,



ಅಂಗಡಿಯಲ್ಲಿ ಸಾಲದ ಬಾಕಿ ಕುರಿತು ವಿಚಾರಿಸಿದರು

ಹನುಮಂತ ಮುಂತಾದವರನ್ನು ಕಂಡು ಮಾತಾಡಿಸಿದರು. ಕೆಲವರು ಮೊದಲಿನಂತೆಯೇ ಉಳಿದಿದ್ದರು. ಮನೆಮಂದಿಗೆ ಭಾರವಾಗಿ ಉಳಿದಿರುವುದು, ಮೈಗಳ್ಳರಾಗಿ ಕುಳಿತಿರುವುದು, ಹೆಂಡತಿ ದುಡಿದದ್ದನ್ನು ಕಸಿದು ತಿನ್ನುವುದರಲ್ಲಿ ಇದ್ದವರನ್ನೂ ನೋಡಿದರು. ಕೆಲವರು ಕೂಲಿ ಕೆಲಸ ಮಾಡಿ ಸಾಕಷ್ಟು ದುಡಿದರೂ ಬೀಡಿ, ಹೆಂಡ ಮುಂತಾದ ದುರಭ್ಯಾಸಕ್ಕೆ ಬಲಿಯಾಗಿ ತಮ್ಮನ್ನೂ, ಸಂಸಾರವನ್ನೂ ಅನಾರೋಗ್ಯಕ್ಕೆ ಗುರಿಮಾಡಿಕೊಂಡವರೂ ಕೇರಿಯಲ್ಲಿದ್ದರು. ಲಿಂಗಣ್ಣನವರು ಕೊನೆಗೆ ''ಹನುಮವ್ವ, ಹುಸೇನವ್ವ, ಶಂಕ್ರಪ್ಪನವರಂತೆ ಸ್ವಾವಲಂಬಿಯಾಗಬೇಕು. ನೋಡಿರಿ. ಈಗ ಕೇರಿ ಸುಂದರ ವಾತಾವರಣದಲ್ಲಿದೆ ಅನ್ನಿಸುತ್ತಿದೆ. ಹೇಳಿದ ಮಾತು, ಕಟ್ಟಿದ ಬುತ್ತಿ ಬಹಳ ಹೊತ್ತು ಉಳಿಯುವುದಿಲ್ಲ. ನಮ್ಮ ನಮ್ಮ ಬದುಕನ್ನು ನಾವೇ ಹಸನ ಮಾಡಿಕೊಳ್ಳಬೇಕು'' ಎಂದು ಹೇಳಿದರು.

ಲಿಂಗಣ್ಣನವರಿಗೆ ಕೇರಿಯ ಮಂದಿ ಪ್ರೀತಿಯಿಂದ ಹಣ್ಣುಹಂಪಲ ನೀಡಿ ಕಳಿಸಿದರು.

೪. ದುಡಿಮೆಯೇ ಬದುಕಿಗೆ ಬೆಳಕು

''ಈರಪ್ಪಣ್ಣ, ನನ್ನ ನೇಗಿಲು ಮಾಡಿದ್ದೀಯೇನಣ್ಣ?'' ಎಂದು ಮಾದಪ್ಪ ಬೆಳಿಗ್ಗೆ ಬಂದು ಕೇಳಿದ.

''ಇನ್ನೂ ತಯಾರಾಗಿಲ್ಲ ಮಾದಪ್ಪ, ನಾಳೆ ಕೊಡುತ್ತೇನೆ'' ಅಂದ ಬಡಿಗೇರ ಈರಪ್ಪ.

''ಭತ್ತ ನಾಟಿ ಮಾಡಬೇಕು. ಇನ್ನೂ ನೇಗಿಲ ಮಾಡಿಲ್ಲವೆಂದರೆ ಹೇಗೆ? ನಾನು ಭೂಮಿಯನ್ನು ಯಾವಾಗ ಉಳುಮೆ ಮಾಡಲಿ?'' ಎಂದು ಸಿಟ್ಟುಮಾಡಿಕೊಂಡು ನಿಂತ.

''ಒಂಟಿಯಾಗಿದ್ದೀನಿ! ಈಗ ಮೊದಲಿನಂತೆ ಕೆಲಸ ಮಾಡಲು ಮೈಯಲ್ಲಿ ಶಕ್ತಿ ಕಡಿಮೆಯಾಗಿದೆ.''

"ಅದು ಸರಿ. ನಿನಗೂ ವಯಸ್ಸಾಯಿತು. ನಿನ್ನ ಮಕ್ಕಳು ಅದೇನು ಮಾಡುತ್ತಾರೋ ತಿಳಿಯದು. ನಿನಗೆ ನೆರವಾಗಬಾರದೇನು?" ಮಾದಪ್ಪ ಕೇಳಿದ.

"ಮೊದಲಿಂದಲೂ ಅವರು ಬಡಿಗತನದ ಕಸುಬಿಗೆ ಕೈಹಚ್ಚಿ ಕಲಿಯಲು ಹೋಗಲಿಲ್ಲ" ಈರಪ್ಪ ಅಂದಾಗ,

"ಓದಿಕೊಂಡರೇನಾಯ್ತು? ಕಸುಬು ಕಲೀಬೇಕು ಎಂಬುದು ತಿಳಿಯುವುದಿಲ್ಲೇನು ಅವರಿಗೆ?" ಎಂದ ಮಾದಪ್ಪ.

"ಅದೇ ಕಷ್ಟಕ್ಕೆ ದಾರಿಯಾಗಿದೆ ನೋಡು ಈಗ."

"ಇರಲಿ ಬಿಡಣ್ಣ. ನಮಗ್ಯಾಕೆ ಓದಿಕೊಂಡವರ ಸಹವಾಸ. ನಾಳಿಗಾದರೂ ನೇಗಿಲು ಸಿದ್ಧಮಾಡಿರು, ಬರುತ್ತೇನೆ" ಎಂದು ಮಾದಪ್ಪ ಹೋಗಿಬಿಟ್ಟ.



"ಕಾಯಕವೇ ಕೈಲಾಸ"

ಬಡಿಗೇರ ಈರಪ್ಪನಿಗೆ ಈಗ ಅರವತ್ತು ವರ್ಷ ವಯಸ್ಸು. ಊರ ಒಕ್ಕಲಿಗರ ವ್ಯವಸಾಯದ ಸಾಮಾನುಗಳನ್ನೆಲ್ಲ ಈತನೇ ಮಾಡಿಕೊಡುತ್ತಿದ್ದ. ಹೆಂಡತಿ ನಂದಮ್ಮನಿಗೆ ಮೊದಲಿನಂತೆ ಗಂಡನ ಕಸುಬಿನಲ್ಲಿ ಜೊತೆ ನಿಂತು ದುಡಿಯುವುದು ಈಗ ಆಗುತ್ತಿರಲಿಲ್ಲ. ಮೂರು ವರ್ಷಗಳ ಹಿಂದೆ ಮಗಳನ್ನು ಮದುವೆ ಮಾಡಿ ಗಂಡನ ಮನೆಗೆ ಕಳಿಸಿದ ಮೇಲೆ, ಆಕೆ ಅಡಿಗೆ ಮಾಡಿ ಎಲ್ಲರಿಗೆ ಊಟಕ್ಕೆ ಹಾಕುವುದರಲ್ಲೇ ಸರಿಹೋಗಿದ್ದಳು. ಮನೆಯಲ್ಲಿರುವ ಇನ್ನೂ ಇಬ್ಬರು ಮಕ್ಕಳಾದ ಮಂಜಪ್ಪ, ಸೋಮಪ್ಪ ಪದವೀಧರರು. ಅವರಿಬ್ಬರು ಪದವೀಧರರಾಗಿ ಆರೇಳು ವರ್ಷಗಳಾಗುತ್ತ ಬಂದಿದ್ದವು. ಆದರೆ ಯಾವ ನೌಕರಿಯೂ ಸಿಕ್ಕಿರಲಿಲ್ಲ. ಈರಪ್ಪನಿಗೆ ಆರೇಳು ಎಕರೆ ಭೂಮಿಯೂ ಇತ್ತು. ಗಂಡ-ಹೆಂಡತಿ ಒಕ್ಕಲತನ ಮಾಡಿಯೂ, ಬಡಿಗತನ ಮಾಡಿ ಮಕ್ಕಳಿಬ್ಬರನ್ನೂ ಓದಿಸಿದರು. ಆದರೆ ಅವರಿಗೆ ನೌಕರಿ ಸಿಗಲಿಲ್ಲ. ಮನೆಯಲ್ಲಿ ಉಳಿದಿದ್ದಾರೆ. ತಂದೆ ಮಾಡುವ ಕಸುಬಿನಲ್ಲಿ ಅವರಿಗೆ ಆಸಕ್ತಿಯಿಲ್ಲದ ಕಾರಣ ಅದನ್ನು ಕಲಿಯಲು ಹೋಗಲಿಲ್ಲ. ಹೆಚ್ಚೆಂದರೆ ಅವರಿಬ್ಬರು ಈಗ ಹೊಲದ ಕೆಲಸ ಮಾತ್ರ ಬೇಕೋ ಬೇಡೋ ಮಾಡಿಕೊಂಡು ಕಾಲ ಕಳೆಯುತ್ತಿದ್ದಾರೆ. ನೌಕರಿಗೆ ಹೋಗಬೇಕೆಂದು ಅರ್ಜಿ ಹಾಕುವುದು, ಸಂದರ್ಶನಕ್ಕೆ ಹೋಗುವುದು ನಡೆದಿದೆಯೇ ಹೊರತು ಯಾವ ಫಲ ಸಿಗುತ್ತಿರಲಿಲ್ಲ. ವಯಸ್ಸಾದ್ದರಿಂದ ಈರಪ್ಪನಿಗೆ ಈಗ ಮೊದಲಿನಂತೆ ದುಡಿದು ಕಸುಬಿನಲ್ಲಿ ಸಂಪಾದನೆ ಮಾಡುವುದು ಆಗುವುದಿಲ್ಲ. ಹೀಗಾಗಿ ಗಂಡ-ಹೆಂಡತಿಗೆ ತುಂಬಾ ಚಿಂತೆಯಾಗಿದೆ.

ನಂದಮ್ಮ ಗಂಡನು ದುಡಿದು ದಣಿಯುವುದನ್ನು ಕಂಡು ಮರುಗುತ್ತಾಳೆ.

"ನಿಮ್ಮಪ್ಪ ಎಷ್ಟಂತ ದುಡೀಬೇಕು? ನಿಮ್ಮನ್ನು ಓದಿಸಿದ್ದೇ ತಪ್ಪಾಯಿತು. ಮೊದಲಿಂದ ಶಾಲೆಗೆ ಕಳಿಸದೆ ಕೆಲಸಕ್ಕೆ ತೊಡಗಿಸಿದ್ದರೆ ಒಳ್ಳೆಯದಿತ್ತು! ನಾವು ಇಷ್ಟು ತೊಂದರೆ ಅನುಭವಿಸುತ್ತಿರಲಿಲ್ಲ. ನಿಮಗೆ ನೌಕರಿ ಸಿಗದಿದ್ದರೇನಾಯಿತು? ನಮ್ಮ ಕಸುಬು ಮಾಡಿಕೊಂಡು ಬದುಕಿದರಾಯಿತು" ಎಂದು ಮಕ್ಕಳಿಗೆ ಬಯ್ಯುತ್ತಾಳೆ. ತಾಯಿ ಬಯ್ಯುವುದು ಮಕ್ಕಳಿಗೆ ಅರ್ಥವಾಗುವುದಿಲ್ಲ. ನೌಕರಿ ಮಾಡಬೇಕೆಂಬ ಆಸೆಯಿಂದ ಮನೆತನದಿಂದ ಬಂದ ಬಡಿಗತನದ ಕಸುಬನ್ನು ಮಾಡಲು ಅವರಿಬ್ಬರೂ ಹಿಂಜರಿಯುತ್ತಿದ್ದರು. ಇದನ್ನು

ಕಂಡ ಈರಪ್ಪನು, "ಇರುವ ಸ್ವಲ್ಪ ಭೂಮಿಯಲ್ಲಿ ಎಲ್ಲರ ಹೊಟ್ಟೆ ಎಲ್ಲಿ ತುಂಬಬೇಕು? ನಾಳೆ ನಿಮಗೂ ಮದುವೆ, ಮಕ್ಕಳು ಅಂತ ಆದರೆ ಆಗ ಏನು ಮಾಡುವಿರಿ? ನೌಕರಿ ಸಿಗುವತನಕ ಈ ಕಸುಬು ಮಾಡಿರಿ. ಸಿಕ್ಕ ಮೇಲೆ ಹೋಗುವಿರಂತೆ. ಇದೇ ಕಸುಬು ಮಾಡಬೇಕು ಅಂತೇನಲ್ಲ. ನಿಮಗೆ ಇಷ್ಟವಾದ ಕೆಲಸವನ್ನಾದರೂ ಮಾಡಿರಿ" ಎಂದು ಬುದ್ಧಿವಾದ ಹೇಳಿ ನೋಡಿದ.

"ಈಗಿನ ಕಾಲದಲ್ಲಿ ಉದ್ಯೋಗ, ವ್ಯಾಪಾರ ಮಾಡಬೇಕಾದರೆ ಬಹಳ ಹಣಬೇಕು. ನಮ್ಮಲ್ಲಿ ಎಲ್ಲಿದೆ? ಯಾರು ಕೊಡುತ್ತಾರೆ? ಎಲ್ಲಿಂದ ತರುವುದು?" ಎಂದೆಲ್ಲ ಯೋಚಿಸಿ, ಸಿಟ್ಟುಮಾಡಿಕೊಂಡು ಮಂಜಪ್ಪ, ಸೋಮಪ್ಪ ಸುಮ್ಮನಿರುತ್ತಿದ್ದರು.

ಈರಪ್ಪನನ್ನು ಸೆಕ್ರಟರಿ ರಮೇಶ ಕರೆ ಕಳಿಸಿದ. ಏನೋ ಕೆಲಸವಿರಬೇಕೆಂದು ಈರಪ್ಪ ಸೊಸೈಟಿಗೆ ಬಂದ.

"ಬಾ ಈರಪ್ಪ, ನಿನ್ನಿಂದ ಒಂದು ಕೆಲಸವಾಗಬೇಕು. ಅದಕ್ಕೆ ಕರೆಸಿದೆ" ಅಂದ ರಮೇಶ.

"ನನ್ನಿಂದ ಆಗುವುದಾದರೆ ಮಾಡುತ್ತೇನೆ" ಅಂದ ಈರಪ್ಪ.

"ನೀನು ನಮಗೆ ಬೇಕಾದ ವ್ಯಕ್ತಿ ಮತ್ತು ನಂಬಿಗಸ್ಥ ಅಲ್ಲವೆ? ನಮ್ಮ ಸೊಸೈಟಿಗೆ ನಾಲ್ಕು ಟೇಬಲ್, ನಾಲ್ಕು ಚೇರ್ ಮತ್ತು ಮೂರು ನಾಲ್ಕು ಬೆಂಚು ಬೇಕಾಗಿವೆ. ಮರದಿಂದ ಮಾಡಿದ್ದು ಬೇಕಾಗಿವೆ. ಮಾಡಿಕೊಡಬೇಕು" ಎಂದು ಕೇಳಿದ. ಈರಪ್ಪನಿಗೆ ಚಿಂತೆಯಾಯಿತು. "ನನ್ನಿಂದ ಎಲ್ಲಿ ಆಗುತ್ತದೆ. ಒಂಟಿಯಾಗಿ ಏನು ಮಾಡೇನು?" ಅಂದ. "ಯಾಕೆ ಈರಪ್ಪ? ಹೀಗನ್ನುತ್ತೀಯಲ್ಲ? ನಿನ್ನ ಮಕ್ಕಳಿದ್ದಾರಲ್ಲ. ಅವರ ಜೊತೆ ಕೂಡಿ ಮಾಡಿದರೆ ಆಯಿತು" ಎಂದ ರಮೇಶನ ಮಾತಿಗೆ, "ಅವರಿಗೆ ಈ ಕಸುಬು ಬರುವುದಿಲ್ಲ. ಅಲ್ಪಸ್ವಲ್ಪ ಬರುತ್ತಿದ್ದರೂ ಅವರು ಮಾಡುವುದಿಲ್ಲ. ನೌಕರಿ ಮಾಡಬೇಕೆಂದು ಅವರ ಆಸೆ" ಎಂದ ನಿರಾಸೆಯಿಂದ.

"ಅಂದರೆ ಅವರೇನೂ ಈಗ ಮಾಡುವುದಿಲ್ಲವೆ?"

"ಅಯ್ಯೋ ಅವರೇನು ಮಾಡುತ್ತಾರೆ. ನೀವು ನೋಡುವುದಿಲ್ಲೇನು? ಒಂದಷ್ಟು ಹೊಲದ ಕೆಲಸ ನೋಡುತ್ತಾರಷ್ಟೇ" ಅಂದ.

ಅಷ್ಟರಲ್ಲಿ ಛೇರಮನ್ ಸಿದ್ಧನಗೌಡ ಬಂದರು. ಈರಪ್ಪನನ್ನು ನೋಡಿ, "ಚೆನ್ನಾಗಿದ್ದೀಯಾ?" ಎಂದು ಕೇಳಿದರು.

"ಹೀಗಿದ್ದೇನೆ ನೋಡಿರಿ" ಎಂದ. ರಮೇಶ, ಈರಪ್ಪನನ್ನು ಕರೆಸಿದ ವಿಚಾರವನ್ನು ಹೇಳಿದ. ಸಿದ್ಧನಗೌಡರು ಎಲ್ಲವನ್ನು ಕೇಳಿ, "ನೋಡು ಈರಪ್ಪ, ಈ ಕಾಲದಲ್ಲಿ ನೌಕರಿ ಅಂದರೆ ಎಲ್ಲರಿಗೂ ಎಲ್ಲಿ ಸಿಗಬೇಕು? ಈಗ ಜನಸಂಖ್ಯೆ ಹೆಚ್ಚಾಗಿದೆ. ದೇಶ ಬೆಳೆದಿದೆ. ದುಡಿದು ಬದುಕುವವರಿಗೆ ಎಷ್ಟೋ ದಾರಿಗಳಿವೆ. ನಿನ್ನ ಮಕ್ಕಳು ಕುಂಟೆ, ಕೂರಿಗೆ, ನೇಗಿಲು ಮಾಡುವುದು ಬೇಡ ಅನ್ನಿ. ಅದಕ್ಕಿಂತ ಮುಂದುವರಿದು ಛೇರು, ಟೇಬಲ್, ಬೆಂಚು, ಮನೆಗೆ ಬಾಗಿಲು, ಕಿಟಕಿ, ಕಪಾಟ, ಮಂಚ ಮುಂತಾದ ವಸ್ತುಗಳನ್ನು ಮಾಡುವುದು ಕಲಿಯಲಿ. ಇವೆಲ್ಲ ನಮ್ಮೂರಲ್ಲಿ ನಮಗೆ ಸಿಗುತ್ತವೆಯೇ? ಪಟ್ಟಣದಿಂದ ನಾವೇ ತರಿಸಿಕೊಳ್ಳುತ್ತಿದ್ದೇನೆ. ಎಷ್ಟು ತೊಂದರೆಯಿದೆ ಅಲ್ಲವೆ? ಇಲ್ಲಿ ನಿಮ್ಮ ಮಕ್ಕಳು ತಯಾರಿಸಿ ಕೊಡುವುದರಿಂದ ಅವರಿಗೆ ಉದ್ಯೋಗ ಸಿಗುತ್ತದೆ. ನಮ್ಮಂಥವರಿಗೆ ವಸ್ತುಗಳು ದೊರೆಯುತ್ತವೆ" ಎಂದು ಹೇಳಿದರು.

"ನಾನು ಅವರಿಬ್ಬರನ್ನು ಕಳಿಸುತ್ತೇನೆ. ಸ್ವಲ್ಪ ತಿಳುವಳಿಕೆಯಾದರೂ ಹೇಳಿರಿ" ಎಂದ ಈರಪ್ಪ, ಮನೆಗೆ ಬಂದ.

ತಂದೆಯ ಹೇಳಿಕೆಯಂತೆ ಮಂಜಪ್ಪ, ಸೋಮಪ್ಪ ಇಬ್ಬರು ಸೊಸೈಟಿಗೆ ಬಂದರು. ಅಲ್ಲಿಗೆ ಶಾಲಾ ಹೆಡ್‌ಮಾಸ್ತರರೂ ಬಂದಿದ್ದರು. ಅವರು ಪ್ರಾಥಮಿಕ ಶಾಲೆಯಲ್ಲಿ ಮಂಜಪ್ಪನಿಗೆ, ಸೋಮಪ್ಪನಿಗೆ ಪಾಠ ಹೇಳಿದ ಮಾಸ್ತರರು. ಸಿದ್ಧನಗೌಡರೇ "ನೋಡು ಮಂಜಪ್ಪ, ಸೋಮಪ್ಪ, ಇವತ್ತು ನಾವು ಯಾರು ಯಾರಿಗೆ ಏನೂ ಹೇಳುವಂತಿಲ್ಲ.

ಆದರೆ ನಿಮ್ಮ ತಂದೆ ಊರಿಗೆ ಬೇಕಾದ ಮನುಷ್ಯ. ಆ ಕಾರಣದಿಂದ ನಿಮಗೆ ಏನೋ ಹೇಳೋಣ ಎಂದು ಕರೆಸಿದ್ದೇನೆ. ನೀವೇನೋ ಓದಿ ಕುಳಿತಿದ್ದೀರಿ. ನಿಮ್ಮ ತಂದೆ-ತಾಯಿ ಮೈಯಲ್ಲಿ ಶಕ್ತಿ ಇರುವವರೆಗೆ ದುಡಿದರು. ನಿಮಗೂ ಓದಿಸಿದರು. ಈಗ ನೀವು ದುಡಿದು ಅವರನ್ನು ನೋಡಿಕೊಳ್ಳಬೇಕು. ನ್ಯಾಯ, ಧರ್ಮ ಅಲ್ಲವೆ? ನೌಕರಿ ಸಿಗಲಿಲ್ಲ ಎಂದು ಯಾಕೆ ಸುಮ್ಮನೆ ಕೂಡುತ್ತೀರಿ? ಇದು ತುಟ್ಟಿಕಾಲ. ಎಷ್ಟು ದುಡಿದರೂ ಸಾಲದು. ನೀವು ತಂದೆಯ ಕಸುಬಿನಲ್ಲಿ ಮುಂದುವರಿದು ದುಡಿಯಬೇಕು'' ಎಂದು ಹೇಳಿದರು. ''ಏನು ಮಾಡುವುದು ಹೇಳಿ? ನೌಕರಿಗಾಗಿ ಎಷ್ಟು ಪ್ರಯತ್ನಿಸಿದರೂ ಸಿಗಲಾರದು. ಸಿಗುವ ಉದ್ಯೋಗಕ್ಕೆ ಕಾದು ಕುಳಿತೆವು'' ಎಂದ ಮಂಜಪ್ಪ.

''ಬೇರೆ ಸ್ವಂತ ಉದ್ಯೋಗ, ವ್ಯಾಪಾರ ಮಾಡಬೇಕೆಂದರೆ ನಮ್ಮಲ್ಲಿ ಹಣವಿಲ್ಲ. ಅನುಭವವೂ ಇಲ್ಲ'' ಎಂದ ಸೋಮಪ್ಪ. ''ಈಗ ನಮಗೆ ಸಾಮಾನು ಬೇಕು. ಮಾಡುವುದಕ್ಕೆ ಪ್ರಯತ್ನಿಸಿರಿ. ಅನುಭವವಿರುವ ನಿಮ್ಮ ತಂದೆ ಜೊತೆಗೆ ಇದ್ದಾನೆ'' ಎಂದು ರಮೇಶ ಹೇಳಿದ. ಅದನ್ನು ಕೇಳಿದ ಹೆಡ್‌ಮಾಸ್ತರರು, ''ನಮ್ಮ ಶಾಲೆಗೂ ಬೆಂಚು, ಟೇಬಲ್, ಛೇರು, ಅಲಮಾರು ಬೇಕಾಗಿವೆ. ನೀವು ಯಾಕೆ ಮಾಡಿಕೊಡಬಾರದು?'' ಎಂದು ಕೇಳಿದರು.

''ಬೇಕಾದರೆ ನಾವು ಮುಂಗಡ ಹಣದ ಸಹಾಯವನ್ನೂ ಮಾಡುತ್ತೇನೆ'' ಎಂದರು ಸಿದ್ಧನಗೌಡರು.

ಆ ಕೆಲಸದಲ್ಲಿ ಮಂಜಪ್ಪನಿಗೆ, ಸೋಮಪ್ಪನಿಗೆ ಇಷ್ಟವಿರಲಿಲ್ಲ. ಉತ್ಸಾಹದಿಂದ ಮಾತಾಡಲಿಲ್ಲ. ಆಗ ಹೆಡ್‌ಮಾಸ್ತರರು, ''ನಿಮಗೆ ಈ ಕೆಲಸದಲ್ಲಿ ಇಷ್ಟವಿಲ್ಲ ಎಂದರೆ ಬೇಡ. ನಿಮ್ಮ ತಂದೆಯ ಕಸುಬನ್ನೇ ಮುಂದುವರಿಸಿರಿ ಎಂದು ಹೇಳುವುದು ತಪ್ಪಾದೀತು. ನಿಮಗೆ ನೌಕರಿ ಸಿಕ್ಕಿಲ್ಲ. ಖಾಲಿ ಕೂಡುವುದು ಸರಿಯಲ್ಲ ಅಲ್ಲವೆ? ನಿಮಗೆ ಆಸಕ್ತಿಯಿರುವ ಯಾವ ಕೆಲಸವನ್ನಾದರೂ ಸರಿಯೇ ಮಾಡುವುದಕ್ಕೆ ಹಿಂಜರಿಯಬಾರದು. ಈಗ ನೋಡಿ, ಕುಂಬಾರ ಲಿಂಗಯ್ಯನ ಮಗ ಸ್ವಲ್ಪ ಓದಿಕೊಂಡಿದ್ದಾನೆ. ಅವನೇನು ಕುಂಬಾರಿಕೆ ಮಾಡುತ್ತಿದ್ದಾನೇನು? ಅವನು ಹೋಟೆಲ್ ಇಟ್ಟುಕೊಂಡಿದ್ದಾನಲ್ಲ. ಬೀಡಿ ಕಟ್ಟುವ

ಕಾಶಿಂಬಿಯ ಮಗ ರಸೂಲ್ ಹಾಲು ಮಾರುತ್ತಿದ್ದಾನೆ. ನಮಗೆಲ್ಲ ಗೊತ್ತಿರುವಂತ ನಾಯಿಂದ ರಾಚಪ್ಪನ ಮಗ ತಂದೆಯ ಕಸುಬಿನಲ್ಲಿ ತೊಡಗದೆ ಬೇಕರಿ ಅಂಗಡಿಯಿಟ್ಟುಕೊಂಡು ಬದುಕುತ್ತಿದ್ದಾನೆ. ಸೋಮಪ್ಪ, ಮಂಜಪ್ಪ ಇಲ್ಲಿ ಕೇಳಿರಿ. ಅವರಿವರದು ಯಾಕೆ? ನನ್ನ ಮಗ ಬಿ.ಎ. ಓದಿದ್ದಾನೆ. ನೌಕರಿ ಸಿಕ್ಕಿಲ್ಲ. ಈಗ ಟೈಲರ್ ಆಗಿಲ್ಲವೆ?'' ಎಂದು ಕೆಲವರ ಉದ್ಯೋಗವನ್ನು ನೆನಪಿಸಿದರು.

''ಖಾಲಿ ಕೂಡುವುದು ಒಳ್ಳೆಯದಲ್ಲ. ಏನಾದರೂ ಉದ್ಯೋಗ ಮಾಡಬೇಕು. ನಮ್ಮ ಬಸವಣ್ಣಪ್ಪ'ಕಾಯಕವೇ ಕೈಲಾಸ' ಅಂತ ನಡೆದು ತೋರಿಸಿಲ್ಲವೇ?'' ಸಿದ್ಧನಗೌಡರು ಅಂದರು.

''ಅಷ್ಟೇ ಅಲ್ಲ ಗೌಡರೆ ಇಲ್ಲಿ ಕೇಳಿರಿ. ಬಸವಣ್ಣಪ್ಪನ ಕಾಲದಲ್ಲಿ ಬಟ್ಟೆ ಒಗೆಯುವವರು, ದನ ಕಾಯುವವರು, ದೋಣಿ ನಡೆಸುವವರು, ಹಗ್ಗ ಒಸೆಯುವವರು, ಕಟ್ಟಿಗೆ ಮಾರುವವರು, ಚಪ್ಪಲಿ ಹೊಲಿಯುವವರು ಯಾರಿದ್ದರೆಂದಿರಿ? ಅವರೆಲ್ಲ ಶ್ರೇಷ್ಠ ಕಾಯಕರು ಮತ್ತು ಶರಣರೂ ಆಗಿದ್ದರು. ಮಾಡುವ ಕಾಯಕದಲ್ಲಿ ಭೇದ ಎಣಿಸುತ್ತಿರಲಿಲ್ಲ. ಮಂತ್ರಿಯಾದ ಬಸವಣ್ಣಪ್ಪನೂ ಒಂದೇ. ಚಪ್ಪಲಿ ಹೊಲಿಯುವ ಹರಳಯ್ಯನೂ ಒಂದೇ. ಅಂದರೆ ಅವರೆಲ್ಲ ಸಮಾನರೇ ಆಗಿದ್ದರು. ಮಾಡುವ ಕೆಲಸದಲ್ಲಿ ಮೇಲು ಕೀಳು ಅಂತ ಇರಲಿಲ್ಲ. ಇಂಥ ಶರಣರ ಪರಂಪರೆ ಇರುವ ದೇಶವಿದು'' ಎಂದು ಉತ್ಸಾಹದಿಂದ, ಪ್ರೀತಿಯಿಂದ, ಅಭಿಮಾನದಿಂದ ಮಾಸ್ತರರು ಹೇಳಿದರು. ಸೋಮಪ್ಪ, ಮಂಜಪ್ಪ ಇದೆಲ್ಲ ಕೇಳಿದರು, ಪ್ರಭಾವಿತರಾದರು.

''ನಾವು ಏನಾದರೂ ಉದ್ಯೋಗ ಆಯ್ದುಕೊಂಡು ದುಡಿದು ಸ್ವಾವಲಂಬಿಗಳಾಗುತ್ತೇವೆ. ತಂದೆ-ತಾಯಿಗಳಿಗೆ ಭಾರವಾಗುವುದಿಲ್ಲ ಮತ್ತು ಅವರನ್ನೂ ಗೌರವದಿಂದ ನೋಡಿಕೊಳ್ಳುತ್ತೇನೆ'' ಎಂದು ಹೇಳಿ ಮನೆಗೆ ಬಂದರು.

***

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದ್ದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು